೩. ಮಂತ್ರಿಗಳಿಂದ ಉತ್ತರ

ವಿಷಯ: ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಮುಂಗಾರು ಮಳೆ ಅಭಾವದಿಂದಾಗಿ ಉಂಟಾಗಿರುವ ಬರಗಾಲ ಪರಿಸ್ಥಿತಿ ಬಗ್ಗೆ.

+ ಶ್ರೀ ಹೆಚ್.ಸಿ.ಶ್ರೀಕಂಠಯ್ಯ(ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದ ನಾಯಕರು, ಸಿಂಧ್ಯಾರವರು ಹಾಗೂ ಇನ್ನೂ ಅನೇಕ ಶಾಸಕ ಮಿತ್ರರುಗಳು , ಮಾನ್ಯ ಭೈರೇಗೌಡರು, ಸೋಮಶೇಖರ್‌ರವರು ಹಾಗೂ ಸದನದ ಎರಡೂ ಕಡೆಯ ಹಲವಾರು ಶಾಸಕರುಗಳು ಈಗಾಗಲೇ ಬರಗಾಲ ಪರಿಸ್ಥಿತಿ ಬಗ್ಗೆ ಚರ್ಚೆ ಮಾಡಿ ಮಾತನಾಡಿ ಸರ್ಕಾರಕ್ಕೆ ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಬಹಳ ಮುಖ್ಯವಾಗಿ ಶೆಟ್ಟರ್‌ರವರು ಹಾಗೂ ಸಿಂಧ್ಯಾರವರು, ಸೋಮಶೇಖರ್‌ರವರು ಮಾತನಾಡುತ್ತಾ ಕುಡಿಯುವ ನೀರಿಗೆ ಅಭಾವವಿರುವುದರಿಂದ ಸರ್ಕಾರ ಈ ಕಡೆಗೆ ಹೆಚ್ಚು ನಿಗಾ ಕೊಟ್ಟು ಹೆಚ್ಚು ಹಣವನ್ನು ಖರ್ಚು ಮಾಡಬೇಕೆಂದು ಮತ್ತು ಇದಕ್ಕಾಗಿ ಎಲ್ಲಾ ರೀತಿಯ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಈಗಾಗಲೇ ಸರ್ಕಾರ ಕುಡಿಯುವ ನೀರು ಹಾಗೂ ಇತರೇ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳುವ ಸಲುವಾಗಿ ಸುಮಾರು 35 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದೆ. ದಿನಾಂಕ 1-4-2001ನೇ ತಾರೀಖಿನಿಂದ ಇವೊತ್ತಿನವರೆಗೂ 35 ಕೋಟಿ ರೂ.ಗಳನ್ನು ಎಲ್ಲಾ ಜಿಲ್ಲೆಗಳಿಗೂ ಸಹ ಹಂಚಿ ಜಿಲ್ಲಾಧಿಕಾರಿಗಳಿಗೆ ಹಾಗೂ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳಿಗೂ ಕೂಡ ಸೂಚನೆ ಕೊಟ್ಟು ಆದಷ್ಟು ಜಾಗ್ರತೆ ಕುಡಿಯುವ ನೀರಿನ ವ್ಯವಸ್ಥೆ ಬಗ್ಗೆ ಕಾರ್ಯಕ್ರಮ ಹಾಕಬೇಕೆಂದು ಮತ್ತು ದನಕರುಗಳಿಗೆ ಮೇವನ್ನು ಒದಗಿಸುವ ಸಲುವಾಗಿ ಎಲ್ಲೆಲ್ಲಿ ಸಂಪೂರ್ಣವಾಗಿ ಮಳೆಯೇ ಆಗಿಲ್ಲವೋ ಅಲ್ಲೆಲ್ಲಾ ಗೋಶಾಲೆಗಳನ್ನು ಏರ್ಪಾಡು ಮಾಡಬೇಕೆಂದು ಸಾಧ್ಯವಾದ ಮಟ್ಟಿಗೆ ಇದನ್ನು ತಾಲ್ಲೂಕು ಹಾಗೂ ಹೋಬಳಿ ಕೇಂದ್ರಗಳಲ್ಲಿ ಏರ್ಪಾಡು ಮಾಡಿ ಶೀಘ್ರವಾಗಿ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕೆಂದು ಈಗಾಗಲೇ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಹಾಗೂ ಸಂಬಂಧಪಟ್ಟ ಅಧಿಕಾರಿಗಳಿಗೆ ಸರ್ಕಾರ ಮುನ್ಸೂಚನೆ ಕೊಟ್ಟಿದ್ದು ಇದಕ್ಕೆ ಸಾಕಷ್ಟು ಹಣವನ್ನೂ ಕೂಡ ಜಿಲ್ಲಾವಾರು ಬಿಡುಗಡೆ ಮಾಡಿದ್ದೇವೆ. ಈಗಾಗಲೇ ಎಲ್ಲಾ ಜಿಲ್ಲಾಧಿಕಾರಿಗಳಿಂದ ಬರಗಾಲ ಪರಿಸ್ಥಿತಿ ಬಗ್ಗೆ ವರದಿಯನ್ನು ತರಿಸಿಕೊಳ್ಳಲಾಗಿದೆಯಲ್ಲದೇ ರಾಜ್ಯ ಮಟ್ಟದ ಕಾರ್ಯದರ್ಶಿಗಳನ್ನು ಕೂಡ ಎಲ್ಲಾ ಜಿಲ್ಲೆಗಳಿಗೆ ಕಳುಹಿಸಿ ಜಿಲ್ಲೆಗಳಿಗೆ ತೀವ್ರವಾಗಿ ಬೇಕಾಗಿರತಕ್ಕಂಥ ವ್ಯವಸ್ಥೆಗೆ ಹಣದ ಬಗ್ಗೆ ಒಂದು ವರದಿಯನ್ನು ಹಾಗೂ ಜಿಲ್ಲೆಯ ಉಸ್ತುವಾರಿ ಸಚಿವರುಗಳೂ ಕೂಡ ಆಯಾಯ ಜಿಲ್ಲೆಯ ಎಲ್ಲಾ ಶಾಸಕ ಮಿತ್ರರನ್ನು ಕರೆಸಿ ಅವರೂ ಕೂಡ ವರದಿಯನ್ನು ಕೊಡಬೇಕೆಂದು ಆದೇಶವನ್ನು ಕೊಟ್ಟ ಹಿನ್ನೆಲೆಯಲ್ಲಿ ಅವರೂ ಕೂಡ ವರದಿಯನ್ನು ಕೊಟ್ಟಿದ್ದಾರೆ. ಈ ಎಲ್ಲಾ ರೀತಿಯ

ವರದಿಗಳನ್ನು ತರಿಸಿಕೊಂಡು ಕ್ರೋಢಿಕರಿಸಿ ತದನಂತರ ನಮ್ಮ ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿ ಬೆಳ ಹಾನಿ, ಮಳೆಯ ಅಭಾವ ಮತ್ತು ಕುಡಿಯುವ ನೀರಿನ ಅಭಾವವನ್ನು ನೀಗಿಸುವ ಸಲುವಾಗಿ 735 ಕೋಟಿ ರೂ.ಗಳನ್ನು ಬಿಡುಗಡೆ ಮಾಡಬೇಕೆಂದು ಕೋರಿದೆಯಲ್ಲದೆ ಪ್ರಥಮ ಕಂತಾಗಿ 350 ಕೋಟಿ ರೂ.ಗಳನ್ನು ಬಿಡುಗಡೆ ಮಾಡಬೇಕೆಂದು ಎರಡು ಮನವಿಗಳನ್ನು ಸಲ್ಲಿಸಲಾಗಿದೆ.

ಶ್ರೀ ಸುರೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ಇಲ್ಲಿ ಒಂದು ಚ್ಯುತಿಯಾಗಿದೆ. ಕಳೆದ ನಾಲ್ಕು ದಿವಸಗಳಿಂದ ಬರಗಾಲ ಪರಿಸ್ಥಿತಿ ಬಗ್ಗೆ ಚರ್ಚೆಯಾಗುತ್ತಿದೆ. ನಿನ್ನೆಯ ದಿವಸ ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಒಂದು ಮೆಮೊರಾಂಡಮ್ ಕೊಟ್ಟು 739 ಕೋಟಿ ರೂ.ಗಳನ್ನು ಕೊಡಬೇಕೆಂದು ಕೇಳಿದ್ದಾರೆ. ಈ ಮೆಮೊರಾಂಡಮ್ 75 ಪುಟಗಳನ್ನೊಳಗೊಂಡಿದೆ. ಈ ವಿಚಾರವನ್ನು ನಿನ್ನೆಯ ದಿವಸವೇ ಬರಗಾಲ ಪರಿಸ್ಥಿತಿಯ ಬಗ್ಗೆ ಚರ್ಚೆ ನಡೆಯುತ್ತಿರುವಾಗಲೇ ಮಾನ್ಯ ಮಂತ್ರಿಗಳು ಇಂಟರ್‌ವಿನ್ ಮಾಡಿ ಸದನಕ್ಕೆ ತಿಳಿಸಬೇಕಾಗಿತ್ತು. ನಾವು ಈ ವಿಚಾರವನ್ನು ಬೇರೆ ಕಡೆಯಿಂದ ತಿಳಿದುಕೊಳ್ಳಬೇಕೆ? ಈ ಸದನಕ್ಕೆ ವಿಚಾರವನ್ನು ತಿಳಿಸದೆ ಇರಲು ಮಂತ್ರಿಗಳಿಗೆ ಏನಾಗಿತ್ತು? ಅವರು ಈ ಸದನವನ್ನು ಬಹಳ ಲಘುವಾಗಿ ತಿಳಿದುಕೊಂಡಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸುರೇಶಕುಮಾರ್‌ರವರು ಎತ್ತಿರುವ ವಿಚಾರ ಬಹಳ ಪ್ರಮುಖವಾದ ವಿಚಾರವಾಗಿದೆ. ಈ ವಿಷಯ ನಿನ್ನೆ ಸಂಜೆ ಗೊತ್ತಾಗಿದೆ. ಇವೊತ್ತು ದೆಹಲಿಗೆ ಅಧಿಕಾರಿಗಳು ಮೆಮೊರಾಂಡಮ್ ತೆಗೆದುಕೊಂಡು ಹೋಗಿದ್ದಾರೆ. ಈ ಮೆಮೊರಾಂಡಮ್ ಪ್ರತಿಯನ್ನು ಕಳುಹಿಸಿಕೊಡಿ ಎಂದು ದೂರವಾಣಿ ಮೂಲಕ ಪ್ರಧಾನ ಕಾರ್ಯದರ್ಶಿಗಳಿಗೆ ತಿಳಿಸಿದಾಗ ಅವರು ನಿಮ್ಮ ಕಛೇರಿಯಿಂದ ಒಬ್ಬರನ್ನು ಕಳುಹಿಸಿಕೊಡಿ ಪ್ರತಿಯನ್ನು ಕಳುಹಿಸಿಕೊಡುತ್ತೇವೆ ಎಂದರು. ನಮ್ಮ ಕಛೇರಿಯಿಂದ ಅವರ ಕಛೇರಿಗೆ ಒಬ್ಬರನ್ನು ಕಳುಹಿಸಿಕೊಟ್ಟಿ ಆದರೆ ಅವರು ಬಾಗಿಲು ಹಾಕಿಕೊಂಡು ಹೋಗಿದ್ದರು. ನಂತರ ಕಂದಾಯ ಮಂತ್ರಿಗಳ ಕಛೇರಿಗೆ ಫೋನ್ ಮಾಡಿ ಮೆಮೊರಾಂಡಮ್ ಪ್ರತಿಯನ್ನು ಕಳುಹಿಸಿಕೊಡಿ ಎಂದು ಮಂತ್ರಿಗಳ ಪಿ.ಎಸ್.ಗೆ ತಿಳಿಸಿದೆ. ಅವರು ಕಳುಹಿಸಿಕೊಡುತ್ತೇವೆಂದು ಹೇಳಿ ಇಲ್ಲಿಯವರೆವಿಗೂ ಮೆಮೊರಾಂಡಮ್ ಪ್ರತಿಯನ್ನು ಕಳುಹಿಸಿಯೇ ಇಲ್ಲ. ಈ ಸದನಕ್ಕೂ ಕೂಡ ನಿನ್ನೆ ಆ ವಿಷಯವನ್ನು ಮಂತ್ರಿಗಳು ತಿಳಿಸಲಿಲ್ಲವೆಂದರೆ ಅದರಲ್ಲಿ ಗೌಪ್ಯತೆಯಾದರೂ ಏನಿದೆ?

ಅಧ್ಯಕ್ಷರು: ಮಾನ್ಯ ಮಂತ್ರಿಗಳು ಬರಗಾಲದ ಪರಿಸ್ಥಿತಿ ಬಗ್ಗೆ ನಡೆದ ಚರ್ಚೆಗೆ ಮೊನ್ನೆಯೇ ಉತ್ತರ ಕೊಡಬೇಕಾಗಿತ್ತು. ಆದರೆ ಅದು ನಿನ್ನೆಗೆ ಮುಂದೂಡಿತು. ನಿನ್ನೆ ಕೂಡ ಇಂದು ಉತ್ತರ ಕೊಡಬೇಕೆಂದು ಪೋಸ್ಟ್‌ಪೋನ್ ಆಯಿತು. ಸದನಕ್ಕೆ

ತಿಳಿಸಬೇಕಾದ ವಿಷಯ ತಿಳಿಸುವಲ್ಲಿ ಲ್ಯಾಪ್ಸ್ ಆಗಿಲ್ಲ. ಶ್ರೀಕಂಠಯ್ಯನವರೇ, ಇನ್ನು ಮುಂದೆ ಸರಿಪಡಿಸಿಕೊಳ್ಳಿ.

ಶ್ರೀ ಎಸ್.ಸುರೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಮೂಲಕ ಕೇಳುವುದೇನೆಂದರೆ, ಮಾನ್ಯ ಖರ್ಗೆಯವರು ಗಮನ ಕೊಡಬೇಕು, ಸರ್ಕಾರ ಈ ವಿಷಯದಲ್ಲಿ ಸದನದ ಕ್ಷಮಾಯಾಚನೆ ಮಾಡಬೇಕು ಇಲ್ಲದೇ ಇದ್ದರೆ ಈ ಸದನಕ್ಕೆ ಚ್ಯುತಿಯಾಗಿದೆ, ಅದರ ಬಗ್ಗೆ ಹಕ್ಕುಚ್ಯುತಿ ಮೂವ್ ಮಾಡಬೇಕಾಗುತ್ತದೆ.

ಅಧ್ಯಕ್ಷರು: ಶ್ರೀಕಂಠಯ್ಯನವರೇ ಅದನ್ನು ಸರಿಪಡಿಸಿಕೊಳ್ಳಿ. ನಾವು ಸರ್ಕಾರ ಉತ್ತರ ಕೊಡಬೇಕಾಗಿರುವುದನ್ನು ಫೋಸ್ಟ್ ಪೋನ್ ಮಾಡಿದ್ದರಿಂದ ಈ ರೀತಿಯಾಗಿರಬಹುದು.

ಶ್ರೀ ಮಲ್ಲಿಕಾರ್ಜುನ ಖರ್ಗೆ(ಗೃಹ ಸಚಿವರು): ಅರ್ಜೆಂಟ್ನಿಯಲ್ಲಿ ರಾಜ್ಯದ ಹಾಗೂ ಜನರ ಹಿತ ದೃಷ್ಟಿಯಿಂದ ಈ ಒಂದು ಮೆಮೊರಾಂಡಂ ಕೊಟ್ಟಿದ್ದು ತಪ್ಪು ಎಂದು ತಾವು ಭಾವನೆ ಮಾಡುವುದಾದರೆ ಅದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಎಸ್.ಸುರೇಶ್‌ಕುಮಾರ್: ಅದನ್ನು ಸದನದ ಗಮನಕ್ಕೆ ಏಕೆ ತರಲಿಲ್ಲ?

ಶ್ರೀ ಮಲ್ಲಿಕಾರ್ಜುನ ಖರ್ಗೆ: ಈಗ ತಂದಿದ್ದಾರಲ್ಲಾ

ಶ್ರೀ ಎಸ್.ಸುರೇಶ್‌ಕುಮಾರ್: ಈಗ ಎಲ್ಲಾ ಮುಗಿದ ಮೇಲೆ ತಂದಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅವರು ರಿಪ್ಲೈ ಕೊಡುವಾಗ ಕೊಡಬೇಕೆಂದು ಇದ್ದರು.

ಅಧ್ಯಕ್ಷರು: ಮಂತ್ರಿಗಳು ರಿಪ್ಲೈ ಏನು ಹೇಳುತ್ತಾರೆಂದು ನೋಡೋಣ, ನೀವು ಎತ್ತಿರುವ ಪ್ರಶ್ನೆಗೆ ಅವರು ರಿಪ್ಲೈ ಹೇಳಬೇಕಲ್ಲಾ.

ಶ್ರೀ ಎಸ್.ಸುರೇಶ್‌ಕುಮಾರ್: ಅವರ ರಿಪ್ಲೈ ಎಲ್ಲಾ ಪತ್ರಿಕೆಯಲ್ಲಿ ಬಂದಿದೆ. ನಮಗೆ ಆ ರಿಪ್ಲೈ ಬೇಕಾಗಿಲ್ಲ. ಈಗಾಗಲೇ ಎಲ್ಲಾ ಪತ್ರಿಕೆಯಲ್ಲಿ ಬಂದುಬಿಟ್ಟಿದೆ.

ಅಧ್ಯಕ್ಷರು: ತಾವು ಎತ್ತಿರುವ ಪ್ರಶ್ನೆಗೆ ಅವರು ಉತ್ತರ ಹೇಳಲಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಯವರು ಏಚಾರವನ್ನು ಬಚ್ಚಿಟ್ಟು ಬದಿಗಿಟ್ಟು ರಿಪ್ಲೈ ಕೊಡುವಾಗ ಹೇಳದೆ ಹೋಗಿದ್ದರೆ ಆಗ ಒಂದು ಮಾತು ಬರುತ್ತಿತ್ತು. ಇನ್ನು ಇವತ್ತು ರಿಪ್ಲೈ ಇದೆ, ಆಗ ಎಲ್ಲಾ ವಿಚಾರ

ಹೇಳುತ್ತಾರೆ. ಅದಕ್ಕೆ ಅಡ್ಡಿ ತೆಗೆದುಕೊಂಡು ಬಂದರೆ ಹೇಗೆ? ತಮಗೆ ಗೊತ್ತಿದ್ದ ಹಾಗೆ ನಿನ್ನೆ ರಿಪ್ಲೈ ಕೊಡುವುದಿತ್ತು. ಅದೂ ಕೂಡ ಫೋಸ್ಟ್ ಫೋನ್ ಆಗುತ್ತಾ ಬಂತು. ಅದಕ್ಕೆ ಮಾನ್ಯ ಮಂತ್ರಿಗಳು ಇವತ್ತು ಉತ್ತರ ಕೊಡುವಾಗ ಹೇಳುತ್ತಾರೆ.

ಶ್ರೀ ಎಸ್.ಸುರೇಶ್‌ಕುಮಾರ್: ರಿಪ್ಲೈ ಕೊಡುವಾಗಲೇ ಕೊಡಬೇಕೆಂದು ಏನೂ ಇಲ್ಲ. He could have intervened at any moment. ನಾವು ಇವತ್ತು ಕೇಂದ್ರ ಸರ್ಕಾರಕ್ಕೆ 79 ಪೇಜ್ ಮೆಮೊರಾಂಡಂ ಕಳುಹಿಸಿ 739 ಕೋಟಿ ರೂಪಾಯಿ ಕೇಳುತ್ತಿದ್ದೇವೆ ಎಂದು ಹೇಳಬಹುದಾಗಿತ್ತಲ್ಲಾ. ಆಗ ಅವರು ಏಕೆ ಹೇಳಲಿಲ್ಲ? ಇಂಟರ್‌ವೀನ್ ಮಾಡಿ ಸದನದ ಗಮನಕ್ಕೆ ಏಕೆ ತರಲಿಲ್ಲ?

ಅಧ್ಯಕ್ಷರು: ಈಗ ಅವರು ಏನು ಹೇಳುತ್ತಾರೆ ನೋಡೋಣ.

ಶ್ರೀ ಎ.ರಾಮದಾಸ್: ರಿಪ್ಲೈ ಬರುವುದಕ್ಕೆ ಮೊದಲು ಕೃಷಿ ಮಂತ್ರಿಗಳು ಹೇಳುತ್ತಾರೆ. ಕೇಂದ್ರಕ್ಕೆ ಕೊಡುವಂತಹ ಪ್ರಮುಖವಾದಂತಹ ಏಚಾರವನ್ನು ನಾವೆಲ್ಲರೂ ಪತ್ರಿಕೆ ಮೂಲಕ ಓದಿ ತಿಳಿದುಕೊಳ್ಳಬೇಕು. ಮೊದಲೆ ಇಂಟರ್‌ವೀನ್ ಆಗಿ ವಿಷಯ ತಿಳಿಸುವುದಕ್ಕೆ ಏನು ಸಮಸ್ಯೆ ಇತ್ತು?

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಖಿರ್ಗಿಯವರು ಮಾನ್ಯ ಮಂತ್ರಿಗಳು ಉತ್ತರ ಹೇಳುವಾಗ ಹೇಳುತ್ತಾರೆಂದು ಹೇಳಿದರು. ಮೊದಲು ಪತ್ರಿಕೆಯಲ್ಲಿ ಹೇಳಿಕೆ ಕೊಟ್ಟು ಆಮೇಲೆ ಇಲ್ಲಿ ಹೇಳಬಹುದಾ ಹೇಗೆ ಎಂದು ಹೇಳಿ.

ಶ್ರೀ ಹೆಚ್.ಸಿ.ಶ್ರೀಕಂಠಯ್ಯ: ನಾನು ಪತ್ರಿಕೆಗಳಿಗೆ ಹೇಳಿಕೆ ಕೊಟ್ಟಿಲ್ಲ.

ಶ್ರೀ ಎಸ್.ಎಸ್.ಪಾಟೀಲ್: ಹಾಗಾದರೆ ಅದು ಹೇಗೆ ಗೊತ್ತಾಯಿತು?

ಶ್ರೀ ಜಗದೀಶ್ ಶೆಟ್ಟರ್: ಒಂದು ಮನವಿ ಪತ್ರ ಕೊಟ್ಟಿದ್ದೇವೆ ಎಂದು ಇಂಟರ್‌ವ್ಯೂನಲ್ಲಿ ಹೇಳುತ್ತಿದ್ದಾರೆ. ಆದರೆ ಅವರಿಗೆ ಅದನ್ನು ಸದನದಲ್ಲಿ ಹೇಳುವುದಕ್ಕೆ ಆಗಲಿಲ್ಲ. ಸಾಯಂಕಾಲ ಒಂದು ಎಲೆಕ್ಟ್ರಾನಿಕ್ ಮೀಡಿಯಾಗೆ ಇಂಟರ್‌ವ್ಯೂ ಕೊಟ್ಟು ನಾವು ಕೇಂದ್ರ ಸರ್ಕಾರಕ್ಕೆ ಮನವಿ ಪತ್ರ ಕಳುಹಿಸಿದ್ದೇವೆ ಎಂದು ಹೇಳುತ್ತಿದ್ದಾರೆ. ಸದನದಲ್ಲಿ ಸಾಯಂಕಾಲ 6.30ರವರೆಗೂ ಇದ್ದಾರೆ. ಸದನದಲ್ಲಿ ಮೊದಲೇ ಹೇಳಬಹುದಾಗಿತ್ತಲ್ಲಾ ಇದು ಹಕ್ಕುಚ್ಯುತಿಯಾಗುತ್ತದೆ, ನಾವು ಹಕ್ಕುಚ್ಯುತಿ ಮೂವ್ ಮಾಡುವುದಕ್ಕೆ ಪರವಾನಗಿ ಕೊಡಬೇಕಾಗುತ್ತದೆ.

ಅಧ್ಯಕ್ಷರು: ಅವರು ಉತ್ತರ ಏನು ಹೇಳುತ್ತಾರೆ ನೋಡೋಣ.

ಶ್ರೀ ಡಿ.ವಿ.ಸದಾನಂದಗೌಡ: ನಾವು ಪತ್ರಿಕೆಯಲ್ಲಿ ಏನಾದರೂ ಆಧಾರ

ಇಟ್ಟುಕೊಂಡು ಓದಿದರೆ ನೀವು ಪತ್ರಿಕೆಯನ್ನು ನಂಬಿಕೊಂಡು ಆರ್ಡರ್ ಮಾಡುತ್ತೀರಿ ಎಂದು ಹೇಳುತ್ತೀರಿ. ಮಾನ್ಯ ಅಧ್ಯಕ್ಷರೆ, ನಾನು ತಮಗೆ ಏನಂತಿ ಮಾಡುವುದೇನೆಂದರೆ, ಪ್ರಮುಖ ಪತ್ರಿಕೆಗಳಲ್ಲಿ ಮೊದಲನೆ ಪುಟದಲ್ಲಿ ಬಂದಂತಹ ವಿಚಾರಗಳನ್ನು ನಾವು ಆಧಾರ ಮಾಡಿ ಓದಿದಾಗ ಅದಕ್ಕೆ ಗೌರವ ಕೊಡುವುದಿಲ್ಲವೆಂದರೆ, ಸರ್ಕಾರ ಯಾವುದೇ ಪತ್ರಿಕೆಗಳಿಗೂ ಕೂಡ ಜಾಹೀರಾತು ಅಥವಾ ಪ್ರಕಟಣೆಗಳನ್ನು ಕೊಡಬೇಡಿ. ಸರ್ಕಾರ ಕೊಟ್ಟ ಪ್ರಕಟಣೆಗಳನ್ನು ಪತ್ರಿಕೆಗಳಲ್ಲಿ ಬಂದರೆ ನಾವು ಹೇಗೆ ನಂಬಬೇಕು. ಪತ್ರಿಕೆಯಲ್ಲಿ ಬಂದಂತಹ ವಿಚಾರಗಳಿಗೆ ಆಧಾರ ಇಲ್ಲ ಎಂದರೆ ಹೇಗೆ?

ಶ್ರೀ ಹೆಚ್.ಸಿ.ಶ್ರೀಕಂಠಯ್ಯ: ಮಾನ್ಯ ಅಧ್ಯಕ್ಷರೆ, ಕೇಂದ್ರಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿರುವುದರ ಬಗ್ಗೆ ಪಾಪ.....

ಶ್ರೀ ಎಸ್.ಸುರೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ಏನು ಇದು ಪಾಪ ಎನ್ನುವುದು. ದಯವಿಟ್ಟು ಯಾವುದನ್ನೂ ಕೂಡ ಲಘುವಾಗಿ ತೆಗೆದುಕೊಳ್ಳಬೇಡಿ. ಪಾಪ ಎನ್ನುವುದು ಏನು? ನನಗೆ ಏನೋ ಒಂದು ಸಿಂಪಥಿ ತೋರಿಸುವುದು ಬೇಡ. I am a member of this House. I have got every right. ನಾನು ಇನ್ನೂ ಒಂದು ಹೆಜ್ಜೆ ಮುಂದೆ ಹೋಗುತ್ತೇನೆ. ಆ 75 ಪೇಜ್ ಮೆಮೊರಾಂಡಂ ಕಾಪಿಯನ್ನು ಎಲ್ಲಾ ಸದಸ್ಯರಿಗೂ ಕೊಡಬೇಕಾಗಿತ್ತು. ಕೊಟ್ಟಿದ್ದಾರೇನು ಅವರು? ಏನು ಪಾಪ ಎನ್ನುವುದು ನೀವು?

ಶ್ರೀ ಹೆಚ್.ಸಿ.ಶ್ರೀಕಂಠಯ್ಯ: ಆಯಿತು, ಕೊಡೋಣ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಅಧ್ಯಕ್ಷರೆ, ಮಾನ್ಯ ಖರ್ಗೆಯವರು ವಿರೋಧಪಕ್ಷದ ನಾಯಕರಾಗಿದ್ದರು. ಅವರು ನೆನಪಿಕೊಳ್ಳಲಿ. ಮೆಮೊರಾಂಡಂನ ಪ್ರತಿಯೊಂದು ಕಾಪಿಯನ್ನು ಅನುಬಂಧದ ಸಹಿತ ಈ ಸದನಕ್ಕೆ ಉತ್ತರ ಕೊಡುವುದಕ್ಕಿಂತ ಮೊದಲು ನಾವು ಎಲ್ಲರಿಗೂ ಸಪ್ಲೈ ಮಾಡಿದ್ದೇವೆ. ಮುಖ್ಯವಾಗಿ ಸದನವನ್ನು ಅಷ್ಟೇ ಅಲ್ಲ ಈ ಬರ ಪರಿಹಾರದ ವಿಚಾರದ ಬಗ್ಗೆ ಕೂಡ ನೀವು ಲಘುವಾಗಿ ತೆಗೆದುಕೊಂಡಿದ್ದೀರಿ ಎಂದು ಒತ್ತಿ ಹೇಳುತ್ತಿದ್ದೇನೆ.

ಶ್ರೀ ಹೆಚ್.ಸಿ.ಶ್ರೀಕಂಠಯ್ಯ: ಹೌದು ಪಾಪ ಅವರು ಬಹಳ ಸೀರಿಯಸ್ ಆಗಿ ಮಾತನಾಡುತ್ತಾರೆ. ನಾವು ಲಘುವಾಗಿ ಮಾತನಾಡುತ್ತೇವ.

ಶ್ರೀ ಎಸ್.ಸುರೇಶ್‌ಕುಮಾರ್: ತೆಲುಗಿನಲ್ಲಿ ಒಂದು ಗಾದೆ ಇದೆ, 'ಚೆಪ್ಪಿ ಚೆಪ್ಪಿ ನಾಕಿ ಮಾನಂ ಪೋಯ' ಎಂದು.

ಶ್ರೀ ಹೆಚ್.ಸಿ.ಶ್ರೀಕಂಠಯ್ಯ: ನನಗೆ ತೆಲುಗು ಅರ್ಥವಾಗಲಿಲ್ಲ.

ಶ್ರೀ ಕೆ.ಶ್ರೀನಿವಾಸಗೌಡ: ಮಾನ್ಯ ಅಧ್ಯಕ್ಷರೆ, ಮಾನ್ಯ ಶ್ರೀಕಂಠಯ್ಯನವರಿಗೆ ಇವತ್ತಿನವರೆಗೂ ಯಾವುದೂ ಸೀರಿಯಸ್‌ನೆಸ್ ಇಲ್ಲ. ಬರದ ಬಗ್ಗೆ ಕೂಡ ಸೀರಿಯಸ್‌ನೆಸ್ ಇಲ್ಲ ಎಂದು ನನಗೆ ಅನ್ನಿಸುತ್ತದೆ.

ಶ್ರೀ ಹೆಚ್.ಸಿ.ಶ್ರೀಕಂಠಯ್ಯ: ಶ್ರೀನಿವಾಸಗೌಡರೆ, ನೀವು ಯಾವುದನ್ನು ಸೀರಿಯಸ್ ಆಗಿ ತೆಗೆದುಕೊಂಡಿದ್ದೀರಿ ಎಂದು ಹೇಳಿ?

ಅಧ್ಯಕ್ಷರು: ಬೇಡ, ಈಗ ಆ ರಾಜಕೀಯ ಎಲ್ಲಾ ಮಾತನಾಡಬೇಡಿ.

ಶ್ರೀ ಕೆ.ಶ್ರೀನಿವಾಸಗೌಡ: ಅದ್ದರಿಂದಲೇ ಅವರು 75 ವರ್ಷವಾದರೂ ಕೂಡ ಗುಂಡುಕಲ್ಲು ಇದ್ದ ಹಾಗೆ ಇದ್ದಾರೆ.

ಶ್ರೀ ಹೆಚ್.ಸಿ.ಶ್ರೀಕಂಠಯ್ಯ: ಮಾನ್ಯ ಅಧ್ಯಕ್ಷರೆ, ಎಲ್ಲಾ ಜಿಲ್ಲೆಗಳಿಗೂ ಸೇರಿ ಒಟ್ಟು 35 ಕೋಟಿ ರೂಪಾಯಿಗಳನ್ನು ಸರ್ಕಾರ ಬಿಡುಗಡೆ ಮಾಡಿದೆ.

ಶ್ರೀ ಎಸ್.ಸುರೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, 75 ಪೇಜ್ ಮೆಮೊರಾಂಡಂ ಹಾಗೂ 739 ಕೋಟಿ ರೂಪಾಯಿ ಬಗ್ಗೆ ನಿನ್ನೆ ಏನು ಕೇಂದ್ರ ಸರ್ಕಾರಕ್ಕೆ ಮನವಿ ಕೊಟ್ಟರು ಅದನ್ನು ಮೊದಲು ಈ ಸದನಕ್ಕೆ ಏಕೆ ತಿಳಿಸಲಿಲ್ಲ. ದಯವಿಟ್ಟು ಮೊದಲು ಅದಕ್ಕೆ ಉತ್ತರ ಕೊಡಲಿ. ಅದರ ಬಗ್ಗೆ ಉತ್ತರ ಕೊಟ್ಟು ಮುಂದೆ ರಿಪ್ಲೈ ಮುಂದುವರೆಸಲಿ.

(ಗೊಂದಲ)

ಅಧ್ಯಕ್ಷರು: ಅವರು ಉತ್ತರ ಹೇಳುವವರೆಗೂ ತಾಳಿ. ಅವರು ಪಾಯಿಂಟ್ ಟು ಪಾಯಿಂಟ್ ಹೇಳುತ್ತಿದ್ದಾರೆ.

ಶ್ರೀ ಎಸ್.ಸುರೇಶ್ ಕುಮಾರ್: ನಾನು ಏನು ಸ್ಪಷ್ಟೀಕರಣ ಕೇಳಿದ್ದೇನೆ, ಅದಕ್ಕೆ ಮೊದಲು ಉತ್ತರ ಕೊಡಲಿ.

ಶ್ರೀ ಯು.ಆರ್.ಸಭಾಪತಿ: ಉತ್ತರ ಹೇಳುವುದಕ್ಕೆ ಬಿಡದೇ ಇದ್ದರೆ ಹೇಗೆ? ಒಂದು ವಾಕ್ಯ ಹೇಳಿದ ತಕ್ಷಣ ಅದನ್ನು ಹೇಳಬೇಕು, ಇದನ್ನು ಹೇಳಬೇಕು ಎಂದು ಹೇಳುತ್ತೀರಲ್ಲಾ ಸ್ವಲ್ಪ ಕುಳಿತುಕೊಂಡು ಕೇಳಿ.

ಶ್ರೀ ಬಿ.ಸೋಮಶೇಖರ್:ನನಗೆ ಏನು ಅನುಮಾನ ಎಂದರೆ 739 ಕೋಟಿ

ರೂಪಾಯಿಯ ಒಂದು ಮನವಿ ಪತ್ರವನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆ ಎಂದು ಮಾನ್ಯ ಸುರೇಶ್ ಕುಮಾರ್‌ರವರು ಹೇಳಿದರು. ಅದೂ ಕೂಡ ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿದೆಯಾ ಎಂಬುದು ಅನುಮಾನವಾಗಿದೆ. ಏಕೆಂದರೆ ಅವರು ಪ್ರಾರಂಭದಲ್ಲಿ ಏನು ಹೇಳಿದರು, 35 ಕೋಟಿ ರೂಪಾಯಿ ರಿಲೀಸ್ ಮಾಡಿದ್ದೇವೆಂದು ಹೇಳಿ, 350 ಕೋಟಿ ರೂಪಾಯಿ ಮನವಿಯನ್ನು ನಾವು ಸಲ್ಲಿಸಿದ್ದೇವೆ ಎಂದು ಹೇಳಿದ್ದಾರೆ. ಕಡತ ನೋಡಿ ಆಕಸ್ಮಾತ್ ಅವರ ಗಮನಕ್ಕೆ ಬಂದಿದ್ದರೆ 739 ಕೋಟಿ ರೂಪಾಯಿ ಎಂದು ಹೇಳುತ್ತಿದ್ದರು.

ಶ್ರೀ ಯು.ಆರ್.ಸಭಾಪತಿ: ಮಾನ್ಯ ಸಚಿವರು ಬಹಳ ಪಾಪ ಇದ್ದಾರೆ. ನೀವೆಲ್ಲಾ ಸುಮ್ಮನೆ ಏಕೆ ಅವರನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದೀರಿ? ಉತ್ತರ ಕೇಳುವಷ್ಟು ಸೌಜನ್ಯ ನಿಮ್ಮಲ್ಲಿ ಇಲ್ಲ.

ಶ್ರೀ ಡಿ.ವಿ.ಸದಾನಂದಗೌಡ: ಮಾನ್ಯ ಅಧ್ಯಕ್ಷರೆ, ನಾವು ಈ ಕಡೆಯಿಂದ ಬರದ ಬಗ್ಗೆ ಆರ್ಗ್ಯುಮೆಂಟ್ ಮಾಡುತ್ತಿರುವಾಗ ಅವರದ್ದು ಸಿಂಗಲ್ ಪಾಯಿಂಟ್ ಪ್ರಾಬ್ಲಂ ಇತ್ತು ಏನೆಂದರೆ ಕೇಂದ್ರ ಸರ್ಕಾರ ಇದಕ್ಕೆ ಎಲ್ಲಾ ಕಾರಣ, ನಮಗೆ ಕೇಳಿದ್ದನ್ನು ಅವರು ಕೊಡುತ್ತಿಲ್ಲವೆನ್ನುವ ಒಂದು ಕಾರಣವನ್ನು ಒತ್ತಿಒತ್ತಿ ಪ್ರತಿಯೊಬ್ಬರೂ ಆ ಕಡೆ ಭಾಗದಿಂದ ಮಾತನಾಡುತ್ತಿದ್ದರು. ಇವತ್ತು ಆ ಮನವಿಯನ್ನು ಕೇಂದ್ರ ಸರ್ಕಾರಕ್ಕೆ ಕೊಟ್ಟಿದ್ದಾರೆ ಎಂದರೆ, ಆ ವಿಚಾರವನ್ನು ಸದನದ ಮುಂದೆ ಹೇಳಲಿಲ್ಲ, ಅದಕ್ಕೆ ಸ್ಪಷ್ಟೀಕರಣ ಹೇಳಬೇಕಲ್ಲಾ. ಸ್ಪಷ್ಟೀಕರಣ ಕೊಡದೇ ಮುಂದೆ ಹೋಗುವುದು ಹೇಗೆ?

ಅಧ್ಯಕ್ಷರು: ಅವರು ಪೂರ್ತಿ ಉತ್ತರ ಹೇಳಲಿ. ಆಮೇಲೆ ನೋಡೋಣ.

ಶ್ರೀ ಹೆಚ್.ಸಿ.ಶ್ರೀಕಂಠಯ್ಯ: ಮಾನ್ಯ ಅಧ್ಯಕ್ಷರೆ, ನಾವು ಮನವಿಯನ್ನು ಸಲ್ಲಿಸಿದ ಮೇಲೆ ನಾಲ್ಕಾರು ಬಾರಿ ರಿಮೈಂಡರ್ ಮಾಡಿ, ಮಾನ್ಯ ಮುಖ್ಯಮಂತ್ರಿಗಳು ಟೆಲಿಫೋನ್‌ನಲ್ಲಿ ಮಾತನಾಡಿದ ಮೇಲೆ 29 ಕೋಟಿ ರೂಪಾಯಿಗಳನ್ನು ಮೊದಲನೆ ಕಂತಾಗಿ ಕೊಟ್ಟಿದ್ದಾರೆ.

ಶ್ರೀ ಡಿ.ವಿ.ಸದಾನಂದಗೌಡ: ತಾವು ಮನವಿ ಏನು ಕಳುಹಿಸಿದ್ದೀರಿ ಅದನ್ನು ಹೇಳಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಅವರು ಏನು ಮನವಿ ಕಳುಹಿಸಿದ್ದಾರೆ ಅದನ್ನು ಮೊದಲು ಸದನದ ಮುಂದೆ ಇರಲಿ.

(ಗೊಂದಲ)

ಅಧ್ಯಕ್ಷರು: ಇಡುತ್ತಾರೆ ಬಿಡಿ. ನೀವು ಮಧ್ಯೆ ಮಧ್ಯೆ ಮಾತನಾಡಿದರೆ ಅವರು ಉತ್ತರ ಹೇಳುವುದಕ್ಕೆ ಆಗುವುದಿಲ್ಲ. ಅವರ ಉತ್ತರ ಪೂರ್ತಿಯಾಗಲಿ ಬಿಡಿ. ದಯವಿಟ್ಟು ಮಧ್ಯ ಎದ್ದು ನಿಲ್ಲಬೇಡಿ. ಅವರಿಗೆ 15 ನಿಮಿಷ ಉತ್ತರ ಕೊಡುವುದಕ್ಕೆ ಅವಕಾಶ ಕೊಡದೇ ಇದ್ದರೆ ಅವರು ಹೇಗೆ ಉತ್ತರ ಕೊಡುತ್ತಾರೆ?

(ಗೊಂದಲ)

೧೧.೧೦ ಪಿಎಂ

ಶ್ರೀ ಎಸ್.ಸುರೇಶ್‌ಕುಮಾರ್: ಅಧ್ಯಕ್ಷರೆ, ನಿಮಗೆ ಸದನದ ಹಕ್ಕುಚ್ಯುತಿಯಾಗಿದೆ ಎಂದು ಅನ್ನಿಸುತ್ತಿಲ್ಲವೇ? I have brought it to the notice of the House that there is a serious lapse on the part of the government. Either you admonish the government.....

MR.SPEAKER: You have raised the subject. Let us hear him also.

ಶ್ರೀ ಎಸ್.ಸುರೇಶ್‌ಕುಮಾರ್: ನಾನು ಅವರು ಉತ್ತರ ಕೊಡುವುದರ ಬಗ್ಗೆ ಮಾತನಾಡುತ್ತಿಲ್ಲ. ನಾನು ಸದನಕ್ಕೆ ಆಗಿರುವ ಅವಮಾನದ ಬಗ್ಗೆ ಮಾತನಾಡುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ ಅವರು ಉತ್ತರ ಕೊಡಲು ಅವಕಾಶ ಮಾಡಿಕೊಡಿ, ತಾವು ಹೇಳಿರುವಂತೆ ಲ್ಯಾಪ್ಸ್ ಆಗಿರುವುದನ್ನು ಬೇರೆ ಫಾರ್ಮ್‌ನಲ್ಲಿ ತೆಗೆದುಕೊಂಡು ಬನ್ನಿ.

ಅಧ್ಯಕ್ಷರು: ಬರಹದಲ್ಲಿ ಕೊಟ್ಟಲ್ಲ ಸುಮ್ಮನೆ ಇಲ್ಲಿ ರೈಸ್ ಮಾಡಿದ್ದೀರಿ, ರೈಟಿಂಗ್‌ನಲ್ಲಿ ಕೊಡಿ ನಂತರ ನಾನು ರೂಲಿಂಗ್ ಕೊಡುತ್ತೇನೆ.

SRI S.SURESH KUMAR: Suo-moto, you can take action.

ಅಧ್ಯಕ್ಷರು: ನಿಜವಾಗಿ ಏನು ಆಗಿದೆ ಎಂಬುದು ಗೊತ್ತಿಲ್ಲವಲ್ಲಾ, ನೀವು ಬರವಣಿಗೆಯಲ್ಲಿ ಏವರವನ್ನು ಎಕ್ಸ್‌ಟ್ರಾಕ್ಟ್ ಮಾಡಿ ಕಳುಹಿಸಿಕೊಡಿ,

(ಗೊಂದಲ)

ಶ್ರೀ ಹೆಚ್.ಸಿ.ಶ್ರೀಕಂಠಯ್ಯ ಕುಡಿಯುವ ನೀರಿಗೆ ಪ್ರಥಮ ಆದ್ಯತೆ ಕೊಟ್ಟು ಹಣವನ್ನು ಖರ್ಚು ಮಾಡಿ ಎಂದಷ್ಟು ಜಾಗ್ರತೆ ಈ ಕೆಲಸವನ್ನು ಮಾಡಬೇಕೆಂದು

ಜಿಲ್ಲಾಧಿಕಾರಿಗಳಿಗೆ ಈಗಾಗಲೇ ನಿರ್ದೇಶನವನ್ನು ಕೊಟ್ಟಿದ್ದೇವೆ. ಜಿಲ್ಲಾವಾರು ವಿವರ ಹೀಗಿದೆ, ಬೆಂಗಳೂರು(ನ) 110 ಲಕ್ಷ ರೂ.; ಬೆಂಗಳೂರು (ಗ್ರಾ) 90 ಲಕ್ಷ ರೂ.; ಕೋಲಾರಕ್ಕೆ 165 ಲಕ್ಷ; ತುಮಕೂರಿಗೆ 95 ಲಕ್ಷ; ಚಿತ್ರದುರ್ಗಕ್ಕೆ 115 ಲಕ್ಷ; ದಾವಣಗೆರೆಗೆ 145ಲಕ್ಷ; ಶಿವಮೊಗ್ಗಕ್ಕೆ 105 ಲಕ್ಷ; ಮೈಸೂರಿಗೆ 65 ಲಕ್ಷ; ಚಾಮರಾಜನಗರಕ್ಕೆ 115 ಲಕ್ಷ; ಮಂಡ್ಯಕ್ಕೆ 70 ಲಕ್ಷ; ಚಿಕ್ಕಮಗಳೂರಿಗೆ 115 ಲಕ್ಷ; ಹಾಸನಕ್ಕೆ 95 ಲಕ್ಷ; ಕೊಡಗಿಗೆ 115 ಲಕ್ಷ; ದಕ್ಷಿಣ ಕನ್ನಡಕ್ಕೆ 165 ಲಕ್ಷ; ಉಡುಪಿಗೆ 165 ಲಕ್ಷ; ಗುಲ್ಬರ್ಗಾಕ್ಕೆ 195 ಲಕ್ಷ; ಬೀದರ್‌ಗೆ 140 ಲಕ್ಷ; ರಾಯಚೂರಿಗೆ 135 ಲಕ್ಷ; ಕೊಪ್ಪಳಕ್ಕೆ 165 ಲಕ್ಷ; ಬೆಳಗಾಂಗೆ 215 ಲಕ್ಷ; ಬಳ್ಳಾರಿಗೆ 115 ಲಕ್ಷ; ಬಿಜಾಪುರಕ್ಕೆ 185 ಲಕ್ಷ; ಬಾಗಲಕೋಟೆಗೆ 125 ಲಕ್ಷ; ಧಾರವಾಡಕ್ಕೆ 35 ಲಕ್ಷ; ಗದಗ್‌ಗೆ 115 ಲಕ್ಷ; ಹಾವೇರಿಗೆ 145 ಲಕ್ಷ; ಉತ್ತರ ಕನ್ನಡಕ್ಕೆ 140 ಲಕ್ಷ; ಹೀಗೆ 3520 ಲಕ್ಷರೂಪಾಯಿಗಳನ್ನು ಈಗಾಗಲೇ ಈ ಎಲ್ಲಾ ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗಿದೆ. ಈ ಹಣವನ್ನು ಶೀಘ್ರವಾಗಿ ಖರ್ಚು ಮಾಡಿದರೆ, ಇನ್ನೂ 40 ಕೋಟಿ ರೂಪಾಯಿಗಳನ್ನು ಸರ್ಕಾರ ಬಿಡುಗಡೆ ಮಾಡಲು ಸಿದ್ಧವಿದೆ ಎಂದು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಈ ಎಲ್ಲಾ ವಿವರಗಳನ್ನು ಸದಸ್ಯರಿಗೆ ಒದಗಿಸಿಕೊಡಲಾಗುವುದು. ಕೇಂದ್ರ ಸರ್ಕಾರದಿಂದ ನಾವು ನಿರೀಕ್ಷೆ ಮಾಡಿದ ಹಣ ಸಕಾಲದಲ್ಲಿ ಬಾರದಿದ್ದರೆ ಆದಷ್ಟು ಜಾಗ್ರತೆ ನಮ್ಮ ಸರ್ಕಾರದ ಹಣವನ್ನೇ ಬಿಡುಗಡೆ ಮಾಡಿ ಕೆಲಸಕಾರ್ಯಗಳು ಇನ್ನೂ ಶೀಘ್ರವಾಗಿ ನಡೆಯುವಂತೆ ಕಾರ್ಯಕ್ರಮ ಹಾಕಿಕೊಳ್ಳಲು ತೀರ್ಮಾನ ಮಾಡಿದ್ದೇವೆ. ನಮ್ಮ ಎರಡನೆ ಆದ್ಯತೆ ಏನೆಂದರೆ ದನಗಳಿಗೆ ಮೇವನ್ನು ಒದಗಿಸಿಕೊಡುವುದು.

ರಾಯಚೂರು, ಕೊಪ್ಪಳ ಆ ಭಾಗದಲ್ಲಿ ಮಳೆ ಇಲ್ಲದೆ ದನಗಳು ಸಾಯುವಂತಹ ಪರಿಸ್ಥಿತಿ ಬಂದಿರುವ ಸಂದರ್ಭದಲ್ಲಿ ಅಲ್ಲಿಗೆ ನಾವು ಖುದ್ದಾಗಿ ಹೋಗಿ ತಹಸೀಲ್ದಾರರ ಸಭೆಯನ್ನು ಕರೆದು ತಾಲ್ಲೂಕು ಹಾಗೂ ಹೋಬಳಿಯಲ್ಲೂ ಸಹ ಗೋಶಾಲೆಗಳನ್ನು ತೆರೆಯಬೇಕು, ಎಷ್ಟು ಹಣಬೇಕಾದರೂ ಕೊಡಲು ಸರ್ಕಾರ ಸಿದ್ಧವಿದೆ ಎಂದು ತಿಳಿಸಿದ್ದೇವೆ. ಎಲ್ಲೆಲ್ಲಿ ಈ ಹುಲ್ಲಿನ ಅಭಾವವಾಗಿದೆಯೊ ಅಲ್ಲಿ ಈ ಹುಲ್ಲು ಬೆಳೆಯುವ ಬೀಜವನ್ನು ಸರಬರಾಜು ಮಾಡಿ ಎಲ್ಲಿ ನೀರಿನ ಆಶ್ರಯವಿದ್ದು ಈ ಹುಲ್ಲನ್ನು ಬೆಳೆಯಲು ಸಾಧ್ಯವಿದೆ ಅಲ್ಲಿ ಅದನ್ನು ಬೆಳೆಯಬೇಕೆಂದು ಆದೇಶವನ್ನು ಸರ್ಕಾರ ಈಗಾಗಲೇ ಕೊಟ್ಟಿದೆ. ಆ ಭಾಗದ ಜನ ಹೆಚ್ಚಾಗಿ ಕೂಲಿಗೋಸ್ಕರ ಆಂಧ್ರಪ್ರದೇಶಕ್ಕೆ ವಲಸೆ ಹೋಗುತ್ತಿದ್ದಾರೆ ಎನ್ನುವ ಒತ್ತಾಯ ಬಹು ಶಾಸಕರಿಂದ ಬಂದಿದೆ. ಅದಕ್ಕೆ ತಕ್ಷಣ ಏರ್ಪಾಡು ಮಾಡಬೇಕೆಂದು ತೀರ್ಮಾನ ಮಾಡಿ ಆದಷ್ಟು ಜಾಗ್ರತೆ ಅವರಿಗೆ ಕೂಲಿಕೊಡುವ ವ್ಯವಸ್ಥೆಯನ್ನು ಮಾಡಬೇಕೆಂದು ಸರ್ಕಾರ ತೀರ್ಮಾನ ಮಾಡಿದೆ. ಮುಖ್ಯವಾಗಿ ನಮ್ಮ ಆರ್‌ಡಿಪಿಎಆರ್ ಸ್ಕೀಂನಿಂದ ಸುಮಾರು 300 ಕೋಟಿ ರೂ. ಕೆಲಸ ಕಾರ್ಯಗಳನ್ನು ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯಿತಿಗಳಿಂದ ಮಾಡಬೇಕೆಂದು

ಸರ್ಕಾರ ತೀರ್ಮಾನ ತೆಗೆದುಕೊಂಡು ಸಂಬಂಧಿಸಿದ ಅಧಿಕಾರಿಗಳಿಗೆ ಸರ್ಕಾರ ಈಗಾಗಲೇ ಆದೇಶವನ್ನು ಕೊಟ್ಟಿದೆ. ಸುಮಾರು 200 ಕೋಟಿ ರೂಪಾಯಿಗಳನ್ನು ಆ ಸಂಸ್ಥೆಯಿಂದ ಈ ಕೆಲಸಕಾರ್ಯಗಳಿಗೆ ಉಪಯೋಗಿಸಬೇಕೆಂದು ಸರ್ಕಾರ ತೀರ್ಮಾನ ತೆಗೆದುಕೊಂಡು ಈಗಾಗಲೇ ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶ ಕೊಟ್ಟಿದ್ದು, ಅದನ್ನು ಪರಿಹಾರ ಕಾಮಗಾರಿಗಳಿಗಾಗಿ ಖರ್ಚುಮಾಡತಕ್ಕಂಥ ವ್ಯವಸ್ಥೆಯನ್ನು ಮಾಡಲಾಗುತ್ತಿದೆ. ಕುಡಿಯುವ ನೀರನ್ನು ಒದಗಿಸುವ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿಯನ್ನು ವ್ಯವಸ್ಥಿತ ರೀತಿಯಲ್ಲಿ ಸರ್ಕಾರ ಕೊಡುತ್ತಿಲ್ಲ ಮತ್ತು 25 ಸಾವಿರ ರೂಪಾಯಿಗಳ ಡಿಪಾಸಿಟ್ ಹಣವನ್ನು ಕೊಡುವುದಕ್ಕೆ ರೈತರಿಗೆ ಬಹಳ ಕಷ್ಟವಾಗುತ್ತದೆಂದು ಬಹುತೇಕ ಎಲ್ಲಾ ಸದಸ್ಯರು ಹೇಳಿದ್ದಾರೆ. ಮತ್ತು ಮಾನ್ಯ ಸಿಂಧ್ಯಾ ಅವರು ಒಂದು ಉದಾಹರಣೆಯನ್ನೂ ಸಹ ಕೊಟ್ಟಿದ್ದರು. ಅವರು ಹೇಳಿರುವುದನ್ನು ವಿಚಾರ ಮಾಡಿದಾಗ ಆ ಹಳ್ಳಿಯಲ್ಲಿ ಈ ಟ್ರಾನ್ಸ್‌ಫಾರ್ಮರ್‌ಗೆ ಆ ಪಂಪ್‌ಸೆಟ್‌ನವರು ಕುಡಿಯುವ ನೀರು ಮತ್ತು ಇನ್ನಿತರ ಉಪಯೋಗಕ್ಕಾಗಿ ಪಂಪ್‌ಸೆಟ್ಟು ಅಳವಡಿಸಿದ್ದು, ಅವರು ಡಿ-ಫಾಲ್ಟರ್ ಆಗಿದ್ದರಿಂದ ಅಲ್ಲಿ ವಿದ್ಯುತ್ ಅನ್ನು ನಿಲುಗಡೆ ಮಾಡಿದರು. ಆದರಿಂದ ಅಲ್ಲಿ ಕುಡಿಯುವ ನೀರಿಗೆ ತೊಂದರೆಯಾಯಿತು. ಆದ್ದರಿಂದ ಇವತ್ತು ಯಾವುದೇ ಕಾರಣದಿಂದ ಗ್ರಾಮಪಂಚಾಯಿತಿ, ತಾಲ್ಲೂಕು ಪಂಚಾಯತಿ, ಜಿಲ್ಲಾಪಂಚಾಯತಿ ಮಟ್ಟಗಳಲ್ಲಿ ಕುಡಿಯುವ ನೀರಿನ ಸಲುವಾಗಿ ವಿದ್ಯುತ್ ಅನ್ನು ನಿಲ್ಲಿಸದೆ ಖಾಯಂ ಆಗಿ ಕೊಡತಕ್ಕಂಥ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಮತ್ತು ಅದಕ್ಕೆ ಕಟ್ಟತಕ್ಕಂಥ ಹಣವನ್ನು ನಮ್ಮ ಕೆ.ಪಿ.ಟಿ.ಸಿ.ಎಲ್.ನವರು ಬಿಲ್ ಮಾಡಿ ಸಂಬಂಧಪಟ್ಟ ಇಲಾಖೆಯಿಂದ ವಸೂಲು ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕೆನ್ನತಕ್ಕಂಥ ತೀರ್ಮಾನವನ್ನೂ ಸಹ ತೆಗೆದುಕೊಂಡಿದ್ದೇವೆ. ಆದ್ದರಿಂದ ಕುಡಿಯುವ ನೀರಿನ ಸಲುವಾಗಿ ಯಾವುದೇ ಕಾರಣದಿಂದ ವಿದ್ಯುಚ್ಛಕ್ತಿ ಸ್ಥಗಿತವಾಗುವುದಿಲ್ಲವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಕೆಲವು ಜಿಲ್ಲೆಗಳ, ತಾಲ್ಲೂಕುಗಳ ಭಾಗಗಳಲ್ಲಿ ಕಳೆದ ವರ್ಷಕ್ಕಿಂತ ಬಹಳ ಕಡಿಮೆ ಮಳೆ ಬಿದ್ದಿರುವುದರಿಂದ ಸಕಾಲದಲ್ಲಿ ಬಿತ್ತನೆ ಕೆಲಸ ಆಗಿಲ್ಲ, ಆಗಿರುವ ಕಡೆ ಒಣಗಿರುವುದರಿಂದ ಅಲ್ಲಿ ಸೂಕ್ತ ಪರಿಹಾರ ಕಾರ್ಯಗಳನ್ನು ಕೈಗೊಳ್ಳುವುದಕ್ಕೆ ಈಗಾಗಲೇ ತೀರ್ಮಾನ ಮಾಡಿದ್ದೇವೆ. ಆದಷ್ಟು ಜಾಗ್ರತೆ ಎಷ್ಟು ಹಣ ಬೇಕೋ ಅಷ್ಟು ಹಣವನ್ನು ರಿಲೀಸ್ ಮಾಡುವುದಕ್ಕೆ ಸರ್ಕಾರ ಹಿಂಜರಿಯುವುದಿಲ್ಲ. ಕೇಂದ್ರ ಸರ್ಕಾರದಿಂದ ಬರತಕ್ಕಂಥ ನೆರವು ನಿಧಾನವಾದರೂ ಸಹ ನಮ್ಮ ಸರ್ಕಾರದಿಂದ ಅದಕ್ಕೆ ಹಣವನ್ನು ಕೂಟ್ಟು ಕೆಲಸ ಮಾಡಿಸುವುದಕ್ಕೆ ಕಾರ್ಯಕ್ರಮಗಳನ್ನು ರೂಪಿಸಿದ್ದೇವೆ. ಹಾಗೆಯೇ ಕೆಲವು ಭಾಗಗಳಲ್ಲಿ ಎಲ್ಲಿ ಪ್ರವಾಹದಿಂದ ಹಾನಿಯಾಗಿದೆ ಅಲ್ಲಿಗೂ ಪರಿಹಾರ ಕಾರ್ಯಗಳನ್ನು ಸರ್ಕಾರ ಏರ್ಪಾಟು ಮಾಡಬೇಕೆನ್ನುವ ತೀರ್ಮಾನವನ್ನು ತೆಗೆದುಕೊಂಡು ಸಂಬಂಧಪಟ್ಟ ಅಧಿಕಾರಿಗಳಿಗೆ ಈಗಾಗಲೇ ಸರ್ಕಾರ

ಆದೇಶವನ್ನು ಕೊಟ್ಟಿದೆ. ಬರಪರಿಹಾರ ಕಾಮಗಾರಿಗಾಗಿ ಸರ್ಕಾರ ಎಂದೂ ಹಿಂದುಮುಂದು ನೋಡದೆ ಹಣವನ್ನು ಖರ್ಚು ಮಾಡುತ್ತಿದೆ. ಅನೇಕ ಸದಸ್ಯರು ವ್ಯವಸಾಯದ ಬಗ್ಗೆ ಕೆಲವು ಮಾತುಗಳನ್ನಾಡಿದ್ದಾರೆ ಅದರ ಬಗ್ಗೆ ಸಂಬಂಧಪಟ್ಟ ವ್ಯವಸಾಯ ಸಚಿವರು ಉತ್ತರ ಕೊಡುವವರಿದ್ದಾರೆ. ಬಹಳ ಮುಖ್ಯವಾಗಿ ಎಲ್ಲಾ ಜಿಲ್ಲೆಗಳಲ್ಲೂ ಬರಪರಿಹಾರ ಕಾರ್ಯವನ್ನು ತ್ವರಿತವಾಗಿ ಸಾಕಷ್ಟು ಹಣವನ್ನು ಹೇರಳವಾಗಿ ಖರ್ಚು ಮಾಡಲು ತಯಾರಿದ್ದೇವೆ. ಕೇಂದ್ರ ಸರ್ಕಾರಕ್ಕೆ ಆಲ್ ಪಾರ್ಟಿ ಡೆಲಿಗೇಷನ್ ತೆಗೆದುಕೊಂಡು ಹೋಗುವುದಕ್ಕೆ ನಮ್ಮ ಮಾನ್ಯ ಮುಖ್ಯಮಂತ್ರಿಗಳು ತೀರ್ಮಾನ ಮಾಡಿದ್ದಾರೆ. ಕೇಂದ್ರ ಸರ್ಕಾರದವರು ನಿನ್ನೆಯ ದಿವಸ ಒರಿಸ್ಸಾ ರಾಜ್ಯಕ್ಕೆ 100 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ನಮ್ಮ ಸರ್ಕಾರಕ್ಕೆ ಅವರು ಇನ್ನೂ ಕೊಟ್ಟಿಲ್ಲ. ಮೊದಲನೇ ಕಂತಿನಲ್ಲಿ 350 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿ ಎಂದು ನಾವು ಕೇಂದ್ರ ಸರ್ಕಾರವನ್ನು ಕೇಳಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್: ಹಿಂದಿನದು 58 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿಲ್ಲವೆಂದು ಹೇಳಿದ್ದಿರಿ. 58 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುವುದಕ್ಕೆ ಯಾವಾಗ ರಿಕ್ವಿಸಿಷನ್ ಕೊಟ್ಟಿದ್ದೀರಿ ನೀವು ಅರ್ಜಿಯನ್ನೇ ಕೊಟ್ಟಿಲ್ಲ. ರಿಮೈಂಡರ್ ಕಳುಹಿಸಿದ್ದೇವೆಂದು ಹೇಳಿದ್ದಿರಿ; ಅದು ಎಲ್ಲಿದೆ ಎನ್ನುವುದನ್ನು ನಮಗೆ ತೋರಿಸಿರಿ. ಆ 58 ಕೋಟಿ ರೂಪಾಯಿಗಳನ್ನು ಕೇಳುವುದಕ್ಕೆ ಕೂಡ ಇನ್ನೂ ರಾಜ್ಯಸರ್ಕಾರದವರು ಅರ್ಜಿ ಕೊಟ್ಟಿಲ್ಲ ಮತ್ತು ರಿಮೈಂಡರ್ ಮಾಡಿಲ್ಲ.

ಶ್ರೀ ಹೆಚ್.ಸಿ.ಶ್ರೀಕಂಠಯ್ಯ: ಆ ಹಣವನ್ನು ಅವರಾಗಿಯೇ ಕೊಡಬೇಕು. ಅದು ನಮ್ಮ ಸರ್ಕಾರಕ್ಕೆ ಬರಬೇಕಾದಂಥ ಹಣ. ಎರಡು ಕಂತುಗಳಲ್ಲಿ ಬರಬೇಕಾಗಿರುವಂಥದ್ದು. ಅದು ಹನ್ನೊಂದನೇ ಹಣಕಾಸಿನ ಆಯೋಗದಿಂದ ಆಗಿರತಕ್ಕಂಥದ್ದು. ಆ ಹಣವನ್ನು ಕೇಂದ್ರ ಸರ್ಕಾರದವರು ನಮ್ಮ ರಾಜ್ಯಸರ್ಕಾರಕ್ಕೆ ಕೊಡಲೇಬೇಕು. ಅದನ್ನು ಕೊಡದೇ ಯಾವುದೇ ಸಂದರ್ಭದಲ್ಲಿ ನಿಲ್ಲಿಸುವ ಹಾಗಿಲ್ಲ. ನಮಗೆ ಕೊಡುವುದನ್ನು ನಿಧಾನಗೊಳಿಸಬಹುದೇ ಹೊರತು ಕೊಡುವುದನ್ನು ತಪ್ಪಿಸಲಿಕ್ಕೆ ಸಾಧ್ಯವಿಲ್ಲ. ಕಳೆದ ಸಾಲಿನಲ್ಲಿ ಅದನ್ನೂ ಸಹ ಕೊಡಲಿಕ್ಕೆ ಬಹಳ ನಿಧಾನ ಮಾಡಿದರು. ನಮ್ಮ ರಾಜ್ಯದಿಂದ ಬರಪರಿಹಾರಕ್ಕೆ 35 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದು ಆದಷ್ಟು ಜಾಗ್ರತೆ ಈ ಹಣವನ್ನು ಖರ್ಚು ಮಾಡಿಸಿ, ಇನ್ನೂ ಒಂದು ಕಂತಿನಲ್ಲಿ ಸುಮಾರು 40 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುವುದಕ್ಕೆ ಸಿದ್ದರಿದ್ದೇವೆ. ಕೆಲವು ಮಾನ್ಯ ಸದಸ್ಯರು ಆತ್ಮಹತ್ಯೆ ಬಗ್ಗೆ ಚರ್ಚೆ ಮಾಡಿದ್ದಾರೆ. ಆತ್ಮಹತ್ಯೆಗೆ ಕಾರಣವೇನು ಎನ್ನುವುದು ಬಹಳ ಮುಖ್ಯವಾದುದು. ನಾವು ರೈತ ಹುಟ್ಟಿಗಿಲ್ಲದ ಸತ್ತ ಹುಟ್ಟಿಗಿಲ್ಲದೆ ವಿಷ ತೆಗೆದುಕೊಂಡ ಎಂದು ಹೇಳುತ್ತೇವೆ. ಕೆಲವು ಪ್ರಕರಣಗಳಲ್ಲಿ

ಇರಬಹುದು. ಆದರೆ, ನಾವು ಅದರ ಹಿನ್ನೆಲೆ ಏನು ಎನ್ನುವುದನ್ನು ಯೋಚಿಸಬೇಕು. ಕೆಲವು ಕಡೆ ಬಹಳ ದುರುಪಯೋಗವಾಗುತ್ತಿದೆ. ಕೆಲವು ಜನರು ಇದಕ್ಕೋಸ್ಕರ ಕಾಯುತ್ತಿರುತ್ತಾರೆ. ಅವನು ಯಾವುದೇ ಕಾರಣಕ್ಕೆ ಸತ್ತರೂ ಸಹ ಈ ಒಂದು ಉದ್ದೇಶವನ್ನು ಮುಂದಿಟ್ಟುಕೊಂಡು ಅವನು ಹೊಟ್ಟಿಗಿಲ್ಲದೆ ಸತ್ತ, ಒಂದು ಲಕ್ಷ ರೂಪಾಯಿಗಳ ಪರಿಹಾರ ಕೊಡಿ ಎನ್ನುತ್ತಾರೆ. ನಿಜವಾಗಿಯೂ ಅವನು ಬಡತನದಿಂದ, ರೋಗದಿಂದ ಸತ್ತಿದ್ದರೆ ಪರಿಹಾರ ಕೊಡಬೇಕಾದುದು ಕರ್ತವ್ಯ ಮತ್ತು ಧರ್ಮ. ಆದರೆ, ಅವನು ಯಾವ ಉದ್ದೇಶಕ್ಕಾಗಿ ಸತ್ತಿದ್ದಾನೆ ಎನ್ನುವುದನ್ನು ಜಿಲ್ಲಾಧಿಕಾರಿಗಳಾಗಲಿ, ಸಂಬಂಧಪಟ್ಟ ಅಧಿಕಾರಿಗಳಾಗಲಿ ಕೂಲಂಕಷವಾಗಿ ಪರಿಶೀಲಿಸಿ, ಹಣವನ್ನು ಕೊಡುವ ವ್ಯವಸ್ಥೆಯನ್ನು ಜಿಲ್ಲಾಧಿಕಾರಿಗಳಿಗೆ ಕೊಟ್ಟಿದ್ದೇವೆ. ಅವರಿಗೆ ಮನವರಿಕೆಯಾದರೆ ಅವನು ಬಡತನದಿಂದ, ಸತ್ತಿದ್ದಾನೆಂದು ಅವರ ಮನಸ್ಸಿಗೆ ಬಂದರೆ ಅವರಿಗೆ ಪರಿಹಾರ ಕೊಡುವ ವ್ಯವಸ್ಥೆ ಇದೆ. ಸತ್ತವರೆಲ್ಲರಿಗೂ ಪರಿಹಾರ ಕೊಡಿ ಎನ್ನುವ ನೀತಿಗೆ ಕೊನೆ ಮೊದಲಿರುವುದಿಲ್ಲ. ನಮ್ಮ ಸದಸ್ಯರೂ ಸಹ ಜವಾಬ್ದಾರಿಯಿಂದ ಯೋಚಿಸಿ, ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳುವಳಿಕೆ ಕೊಟ್ಟು, ನಿಜವಾಗಿಯೂ ಅವನು ತೊಂದರೆಯಿಂದ, ಕಷ್ಟದಿಂದ ಸತ್ತಿದ್ದರೆ ಅವನಿಗೆ ಪರಿಹಾರ ಕೊಡಿಸಬೇಕಾದುದು ನಮ್ಮ ಧರ್ಮ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮುಖ್ಯವಾಗಿ ಪೋಲೀಸ್ ಇಲಾಖೆಯವರು, ಜಿಲ್ಲಾಧಿಕಾರಿಗಳು, ಎಲ್ಲರೂ ಸಹ ಅದನ್ನು ತೀರ್ಮಾನಿಸಿ, ಅವರಿಗೆ ಹಣವನ್ನು ಬಿಡುಗಡೆ ಮಾಡಬೇಕೇ ಹೊರತು ಎಲ್ಲರೂ ಸಹ ಒತ್ತಾಯಿಸಿ, ಅವನು ಹೊಟ್ಟಿಗಿಲ್ಲದೆ ಸತ್ತ ಎಂದು ಸುಳ್ಳು ಪ್ರಚಾರ ಮಾಡಿ ಹಣವನ್ನು ಬಿಡುಗಡೆ ಮಾಡಿಸುವ ವ್ಯವಸ್ಥೆಗೆ ನಾವು ಕೈ ಹಾಕಬಾರದು ಎನ್ನುವ ಮಾತನ್ನು ನಾನು ತಮಗೆ ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಪ್ರತಿಯೊಬ್ಬರಿಗೂ ಹಕ್ಕಿದೆ. ನಿಜವಾಗಿಯೂ ಆ ರೀತಿ ಸತ್ತಿದ್ದರೆ ಹೋರಾಟ ಮಾಡಿ ಪರಿಹಾರ ಕೊಡಿಸಬೇಕು. ಯಾವುದೋ ಉದ್ದೇಶದಿಂದ, ಸಂಸಾರದ ಕಷ್ಟದಿಂದ, ಇನ್ಯಾವುದೋ ಉದ್ದೇಶದಿಂದ ಸತ್ತರೆ ಆದಕ್ಕೆ ಸರ್ಕಾರ ಪರಿಹಾರ ಕೊಡಬೇಕೆಂದು ಹೇಳುವುದು ಸಾಧುವಾದುದಲ್ಲವೆನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲಿಚ್ಚಿಸುತ್ತೇನೆ. ಬಹಳ ಮುಖ್ಯವಾಗಿ, ಬಡ್ಡಿ ಮನ್ನಾ ಮಾಡುವ ವಿಚಾರ. ಸಹಕಾರಿ ಸಚಿವರು ಮೊನ್ನೆ ತಿಳಿಸಿದರು. ರೈತ ಇವತ್ತಿನ ದಿವಸ ಅಸಲನ್ನು ಕಟ್ಟುವುದಕ್ಕೆ ತಯಾರಾಗಿದ್ದರೆ, ತನ್ನ ಅಸಲನ್ನು ಪೂರ್ಣವಾಗಿ ಸಹಕಾರ ಸಂಘಗಳಿಗೆ ಕಟ್ಟುವುದಕ್ಕೆ ತಯಾರಾಗಿದ್ದರೆ ಅಸಲು ಕಟ್ಟಿಸಿಕೊಂಡು ಬಡ್ಡಿ ಮನ್ನಾ ಮಾಡುವುದನ್ನು ಸರ್ಕಾರ ಕನ್‌ಸಿಡರ್ ಮಾಡಬಹುದು.

ಶ್ರೀ ಎಸ್.ಎಸ್.ಪಾಟೀಲ್: ಅಸಲು ಕಟ್ಟದರೆ ಬಡ್ಡಿ ಮನ್ನಾ ಮಾಡುತ್ತೇವೆಂದು ಹೇಳಿ.

ಶ್ರೀ ಹೆಚ್.ಸಿ.ಶ್ರೀಕಂಠಯ್ಯ: ಅದರ ಬಗ್ಗೆ ಪರಿಶೀಲನೆ ಮಾಡಬಹುದೆಂದು ಹೇಳಿದೆ. ನಾನು ಆ ಖಾತೆಯ ಸಚಿವನಾಗಿದ್ದಿದ್ದರೆ ಹೇಳುತ್ತಿದ್ದೆ. ಅದರ ಬಗ್ಗೆ ಸಹಕಾರ ಸಚಿವರು ಹೇಳುತ್ತಾರೆ. ಸಿಂಧ್ಯರವರು ಕೇಳಿದ್ದಕ್ಕೆ ಅವರು ಹೇಳಿಕೆ ಕೊಡುತ್ತೇನೆಂದು ಹೇಳಿದರು. ಸಹಕಾರ ಮಂತ್ರಿಗಳು ಆ ತೀರ್ಮಾನ ತೆಗೆದುಕೊಳ್ಳಬೇಕು. ರೈತನಿಗೆ ಅನುಕೂಲವಾಗುವ ಕೆಲಸ ಮಾಡಬೇಕಾದುದು ನಮ್ಮ ಧರ್ಮ, ಮಾಡಬಾರದೆಂದಲ್ಲ. ಇವತ್ತು ನಮ್ಮ ನ್ಯಾಷನಲೈಸ್ಡ್ ಬ್ಯಾಂಕುಗಳೂ ಸಹ ಒಂದೇ ಸಾರಿ ನಾವು ಅಸಲು ಕಟ್ಟುವುದಾದರೆ ಬಡ್ಡಿಯಲ್ಲಿ ರಿಯಾಯಿತಿ ಕೊಡುವುದನ್ನು ಅವರು ಮಾಡಿದ್ದಾರೆ. ಅದು ಒನ್‌ಟೈಂ ಸೆಟ್‌ಲ್‌ಮೆಂಟ್. ಅದನ್ನು ಮಾಡುವುದಕ್ಕೆ ನಮ್ಮ ಸರ್ಕಾರ ಸಹ ತಯಾರಿದೆ. ಅದಕ್ಕೆ ತಾವು ಅವರು ಮಾಡಿದ ಘೋಷಣೆ ಹುರುಳಿಲ್ಲದ್ದು 250 ಕೋಟಿ ರೂ. ಮನ್ನಾ ಮಾಡಿದ್ದೇವೆಂದು ಹೇಳಿದ್ದು.....

ಶ್ರೀ ಎಸ್.ಎಸ್.ಪಾಟೀಲ್: 252 ಕೋಟಿ ರೂ.ಗಳ ಬಗ್ಗೆ ಲಿಸ್ಟ್ ತರಿಸಿ.

ಶ್ರೀ ಹೆಚ್.ಸಿ.ಶ್ರೀಕಂಠಯ್ಯ: ಅವರು ಹೇಳಿದ್ದಾರೆ.

ಶ್ರೀ ಎಸ್.ಎಸ್.ಪಾಟೀಲ್: ಅಧಿಕಾರಿಗಳು ಹೇಳಿದ್ದರ ಮೇಲೆ ಅವರು ಹೇಳುತ್ತಾರೆ ಅಧಿಕಾರಿಗಳು ತಪ್ಪು ವರದಿ ಕೊಟ್ಟಿದ್ದಾರೆ. ನೀವೂ ಸಹಕಾರಿ ಮಂತ್ರಿಗಳಾಗಿ ಕೆಲಸ ಮಾಡಿದವರು. 252 ಕೋಟಿ ರೂ. ಆಗುತ್ತದೆಂದು ನೀವು ಹೇಳಿದರೆ, ಅದನ್ನು ನಾವು ಒಪ್ಪುತ್ತೇವೆ.

ಶ್ರೀ ಹೆಚ್.ಸಿ.ಶ್ರೀಕಂಠಯ್ಯ: ಅಧಿಕಾರಿಗಳು ಆ ರೀತಿ ಯಾರೂ ಸಹ ಮಿಸಲೀಡ್ ಮಾಡುವುದಕ್ಕೆ ಸಾಧ್ಯವಿಲ್ಲ. ಅದನ್ನು ನಾನು ಒಪ್ಪುವುದಿಲ್ಲ. ಆ ತರಹ ಮಾಡಿದರೆ ಅವರು ಅಧಿಕಾರಿಗಳಾಗಿರುವುದಕ್ಕೆ ನಾಲಾಯಕ್ ಎಂಬ ಮಾತನ್ನು ಹೇಳಬೇಕಾಗುತ್ತದೆ. ಆ ರೀತಿ ಹೇಳಬಾರದು. ಯಾರೂ ಸಹ ಮಿಸ್‌ಲೀಡ್ ಮಾಡಿಲ್ಲ ಮಾಡುವುದಕ್ಕೆ ಸಾಧ್ಯವೂ ಇಲ್ಲ.

ಶ್ರೀ ಡಿ.ಕೆ.ಶಿವಕುಮಾರ್(ಸಹಕಾರ ಮಂತ್ರಿಗಳು): ನಾನು ಏವರವಾಗಿ ಹೇಳಿಕೆ ಕೊಡುತ್ತೇನೆಂದು ಹೇಳಿದ್ದೇನೆ. ಈಗ ಕಂದಾಯ ಸಚಿವರು ಬರಗಾಲದ ಬಗ್ಗೆ ಉತ್ತರ ಕೊಡುತ್ತಿದ್ದಾರೆ. ನಿಮಗೂ ಗೊತ್ತಿದೆ, ಬಡ್ಡಿ ಸಿಸ್ಟಂ, ಅಲ್ಪಾವಧಿ, ದೀರ್ಘಾವಧಿ ಇದನ್ನೆಲ್ಲಾ ಯಾವಾಗ ಮಾಡುವುದು ಎಂಬುದು ಗೊತ್ತಿದೆ. ಈಗ ಅಷ್ಟು ಎಮರ್‌ಜೆನ್ಸಿ ಏನಿದೆ? ಈಗ ಬರವನ್ನು ನಿವಾರಿಸುವುದಕ್ಕೆ ಏನಾಗಬೇಕು ಎನ್ನುವ ವಿಚಾರದ ಬಗ್ಗೆ ಅರ್ಜೆಂಟ್ ಆಗಿ ತಾವು ಸೂಚನೆ ತಂದಿದ್ದೀರಿ, ಅದಕ್ಕೆ ಅವರು ವಿವರಣೆ ಕೊಡುತ್ತಿದ್ದಾರೆ. ರಿಕವರಿಗೆ ಟೈಂ ಇದೆ. ಈಗ ಸೀಸನ್ ಆಗಲೀ, ರಿಕವರಿಯಾಗಲಿ, ಮುಂದಕ್ಕೆ ರೈತರಿಗೆ ಅನುಕೂಲವಾಗಲಿ. ನಬಾರ್ಡ್ ಛೇರ್ಮನ್‌ರವರು ಆಗಲೇ

ಬೆಂಗಳೂರಿಗೆ ಬಂದು ಕುಳಿತಿದ್ದಾರೆ ತಮಗೆ ಗೊತ್ತಿದೆ.

ಶ್ರೀ ಹೆಚ್.ಸಿ.ಶ್ರೀಕಂಠಯ್ಯ: ಬಡ್ಡಿ ಮನ್ನಾ ಮಾಡುವುದನ್ನು ಬರಗಾಲದಲ್ಲೇ ಮಾಡಬೇಕು. ನಾವು ಚೆನ್ನಾಗಿ, ಸುಭಿಕ್ಷವಾಗಿದ್ದ ಕಾಲದಲ್ಲಲ್ಲ. ಅದನ್ನು ಅವರು ಪರಿಶೀಲಿಸುವುದಕ್ಕೆ ತಯಾರಾಗಿದ್ದಾರೆ. ಇದೊಂದು ಸಂದರ್ಭ. ಮಳೆ ಇಲ್ಲದೆ, ರೈತನಿಗೆ ಕಷ್ಟವಾಗುವ ಸಂದರ್ಭದಲ್ಲಿ ಅವನ ನೆರವಿಗೆ ಬರುವುದು ಸರ್ಕಾರದ ಕರ್ತವ್ಯವಾಗಿದೆ. ಬಡ್ಡಿಯನ್ನು ಮನ್ನಾ ಮಾಡುವುದಕ್ಕೆ ಸರ್ಕಾರ ಖಂಡಿತವಾಗಿಯೂ ಬದ್ಧವಾಗಿದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲಿಚ್ಚಿಸುತ್ತೇನೆ. ಶ್ರೀ ವೈ.ಕೆ.ರಾಮಯ್ಯನವರು ಪರಿಸರದ ಬಗ್ಗೆ ಬಹಳ ಉತ್ತಮ ಸಲಹೆ ಕೊಟ್ಟಿದ್ದಾರೆ. ಇವತ್ತು ಪರಿಸರ ಬಹಳ ಮುಖ್ಯ ಎಂಬುದನ್ನು ಯೋಚಿಸಬೇಕು. ಕೇಂದ್ರಸರ್ಕಾರದ ಆಮದು ಮತ್ತು ರಫ್ತು ನೀತಿಯಿಂದ, ಇವತ್ತು ಬಹಳ ಮುಖ್ಯವಾಗಿ ಬೆಲೆ ಕುಸಿತಕ್ಕೆ ಕಾರಣವೇನೆಂಬುದರ ಬಗ್ಗೆ ಅವರು ಚೆನ್ನಾಗಿ ವಿವರಿಸಿದ್ದಾರೆ. ನಮ್ಮಲ್ಲಿ ಇವತ್ತು ಕೋಟ್ಯಾಂತರ ರೂಪಾಯಿ ಬೆಳೆ ಬಾಳುವ ಸಕ್ಕರೆ ದಾಸ್ತಾನಿದೆ. ಸಕ್ಕರೆಯನ್ನು ಹೊರಗಡೆಯಿಂದ ಆಮದು ಮಾಡುತ್ತಾರೆ. ಬೇಕಾದಷ್ಟು ಜೋಳವನ್ನು ಬೆಳೆಯುತ್ತೇವೆ. ತೊಗರಿ ಬೆಳೆದು, ರೈತರು ಬಹಳ ತೊಂದರೆಗೀಡಾದರು. ಬರ್ಮಾದಿಂದ ತೊಗರಿ ತರಿಸಿಕೊಳ್ಳುತ್ತಾರೆ. ಇವತ್ತು ಕೊಬ್ಬರಿ, ತೆಂಗಿನಕಾಯಿ ಬೆಳೆದು ರೈತನಿಗಾಗಿರುವ ಕಷ್ಟ ನೋಡಬೇಕು. ಮಲೇಷಿಯಾ ಮತ್ತು ಶ್ರೀಲಂಕಾದಿಂದ ಎಣ್ಣೆ ತರಿಸುತ್ತಾರೆ. ಇನ್ನೆಲ್ಲಿ ಕೊಬ್ಬರಿ ಬೆಲೆ ಜಾಸ್ತಿಯಾಗುತ್ತದೆ? ಆ ಒಂದು ಆಮದು ನೀತಿ ಬಗ್ಗೆ ಅವರು ಬಹಳ ಚೆನ್ನಾಗಿ ಹೇಳಿದ್ದಾರೆ.

೧.೪೦ ಪಿಎಂ

ಕೇಂದ್ರ ಸರ್ಕಾರದವರು ಆದಷ್ಟು ಜಾಗ್ರತೆ ಇದರ ಬಗ್ಗೆ ತೀವ್ರವಾಗಿ ಯೋಚಿಸಬೇಕು. ಬೆಲೆ ಕುಸಿತದಿಂದಾಗಿರತಕ್ಕಂಥ ದುಷ್ಪರಿಣಾಮಗಳ ಬಗ್ಗೆ ಮಾನ್ಯ ಸದಸ್ಯರು ಬಹಳ ಚೆನ್ನಾಗಿ ಸಭೆಗೆ ತಿಳಿಸಿದರು. ನಾನೂ ಕೂಡ ಅದರ ಬಗ್ಗೆ ಕಳಕಳಿಯನ್ನು ವ್ಯಕ್ತಪಡಿಸುತ್ತಾ ತಾವು ಹಾಗೂ ತಮ್ಮ ನಾಯಕರು ಹಾಗೂ ಉಪ ನಾಯಕರು ಹಾಗೂ ಮಾನ್ಯ ರಾಮದಾಸ್‌ರವರು ಬಹಳ ಚಾನ್ನಾಗಿ ಆರ್ಗುಮೆಂಟ್ ಮಾಡುತ್ತೀರಿ. ತಾವು ಎಲ್ಲರೂ ಸೇರಿ ಕೇಂದ್ರ ಸರ್ಕಾರಕ್ಕೆ ಇದರ ಬಗ್ಗೆ ಹೇಳಬೇಕಾಗುತ್ತದೆ. ಕೇಂದ್ರ ಸರ್ಕಾರದವರು ಆ ನೀತಿಯನ್ನು ಮಾರ್ಪಾಡು ಮಾಡಿದರೆ ಖಂಡಿತವಾಗಿ ನಮ್ಮಲ್ಲಿ ರೈತ ಬೆಳೆದ ಬೆಳೆಗೆ ಬೆಲೆ ಏರುತ್ತದೆ ಎನ್ನತಕ್ಕಂಥ ಮಾತನ್ನು ಹೇಳಲಿಚ್ಚಿಸುತ್ತೇನೆ. ಇನ್ನು ಅನೇಕ ಮಾನ್ಯ ಸದಸ್ಯರು ರೈತರಿಗೆ ಅನುಕೂಲವಾಗತಕ್ಕಂಥ ಬಹು ಮುಖ್ಯವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಸರ್ಕಾರದ ವೈಫಲ್ಯದ ಬಗ್ಗೆ ಹೇಳಿದ್ದಾರೆ, ಸರ್ಕಾರ ಯಾವುದೇ ಕಾರ್ಯವನ್ನು ಮಾಡುವಲ್ಲಿ

ವಿಫಲರಾಗಿಲ್ಲವೆಂಬುದು ನಿಮಗೆಲ್ಲರಿಗೂ ಗೊತ್ತಿದೆ. ನಮ್ಮ ಸಿಂಧ್ಯಾರವರು ಹಾಗೂ ಸೋಮಶೇಖರ್‌ರವರ ಸರ್ಕಾರ ಇದ್ದಾಗ ಎಷ್ಟರ ಮಟ್ಟಗೆ ಕೆಲಸ ಆಗಿತ್ತು; ಇವತ್ತು ಎಷ್ಟರ ಮಟ್ಟಗೆ ಕೆಲಸ ಆಗಿದೆ ಅದರಲ್ಲೂ ಗ್ರಾಮೀಣಾಭಿವೃದ್ಧಿಗೆ ರಸ್ತೆ ನೀರು, ಇವುಗಳ ಹೆಚ್ಚಿನ ಸೌಲಭ್ಯದ ಜೊತೆಗೆ ವಿದ್ಯುತ್ ಹೆಚ್ಚಿಗೆ ಉತ್ಪಾದನೆಗೆ ನಮ್ಮ ಸರ್ಕಾರ ಇವತ್ತು ಕೋಟ್ಯಾಂತರ ರೂಪಾಯಿಗಳ ಬಂಡವಾಳವನ್ನು ಹಾಕುತ್ತಿರುವುದು ತಮಗೆ ಗೊತ್ತಿದೆ, ಈ ವಿಷಯದಲ್ಲಿ ನಾವು ಪರಿಪೂರ್ಣತೆಯನ್ನು ಸಾಧಿಸಿದರೆ ಇವತ್ತು ರೈತರಿಗೆ ನೀರು ಮತ್ತು ವಿದ್ಯುತ್ ಇವೆರಡನ್ನು ಕೊಟ್ಟರೆ ಸಾಕು ಅವನು ಖಂಡಿತವಾಗಿ ತನ್ನ ಬಾಳನ್ನು ಹಸನಾಗಿ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾನೆ. ಅದಕ್ಕಾಗಿ ಸನ್ಮಾನ್ಯ ಕೃಷ್ಣಾರವರ ಮುಖಂಡತ್ವದಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿದ್ದೇವೆ. ಇವತ್ತು ನಮ್ಮ ಸ್ನೇಹಿತರಾದ ಸುರೇಶ್ ಕುಮಾರ್‌ರವರು ಯಾವುದೇ ವಿಷಯ ಸಿಕ್ಕರೆ ಬಹಳ ಚೆನ್ನಾಗಿ ಭಾಷಣ ಮಾಡುತ್ತಾರೆ, ಬೆಂಗಳೂರಿನಲ್ಲಿರುವ ರಸ್ತೆ ಇವರ ಕಾಲದಲ್ಲಿ ಓಡಾಡುವ ತರಹ ಇತ್ತೆ? ಎಲ್ಲಾ ಗುಂಡಿ ಬಿದ್ದು ಹಾಳಾಗಿತ್ತು. ನಮ್ಮ ಸರ್ಕಾರ ಬಂದಮೇಲೆ ಇವೆಲ್ಲವೂ ಸರಿ ಮಾಡಿದವು.

ಶ್ರೀ ಎಸ್.ಸುರೇಶ್ ಕುಮಾರ್: ನಾನು ಭಾಷಣ ಮಾಡಲಿಲ್ಲ ಪಾಯಿಂಟ್ಸ್ ಹೇಳಿದೆ.

ಶ್ರೀ ಹೆಚ್.ಸಿ.ಶ್ರೀಕಂಠಯ್ಯ: ನೀವು ಹೇಳಬೇಕಾದರೆ ಬಹಳ ಏರೋಧವಾಗಿ ಒಂದು ತರಹ ಹೇಳುತ್ತೀರಿ.

ಶ್ರೀ ಎಸ್.ಎಸ್.ಪಾಟೀಲ್: ನೀವು ಹೇಳಿದ ಹಾಗೆ ಮಾನ್ಯ ಸಿಂಧ್ಯಾರವರು ಹಾಗೂ ಮಾನ್ಯ ಸೋಮಶೇಖರ್‌ರವರು ಇದ್ದಂಥ ಸಂದರ್ಭದಲ್ಲಿ ಅವರು ಮಾಡಿ ಇಟ್ಟು ಹೋಗಿದ್ದರು ಆ ಕೆಲಸ ನೀವೇನೂ ಮಾಡಲಿಲ್ಲ.

ಶ್ರೀ ಹೆಚ್.ಸಿ.ಶ್ರೀಕಂಠಯ್ಯ: ದುಡ್ಡು ಎಲ್ಲಿತ್ತು ಸ್ವಾಮಿ? ಇವತ್ತು ಒಂದೊಂದು ತಾಲ್ಲೂಕಿನಲ್ಲಿ ನಬಾರ್ಡ್ ರಸ್ತೆಗಳಾಗಲಿ, ಹುಡ್ಕೋದಿಂದ ಬಂದ ಸಹಾಯವಾಗಲಿ, ನೂರು ಲಕ್ಷಗಳ ಯೋಜನೆಯಾಗಲಿ, ಪ್ರಧಾನಮಂತ್ರಿಗಳ ಸಡಕ್ ಯೋಜನೆಯಾಗಲಿ ಅನುಷ್ಠಾನಗೊಳ್ಳುತ್ತಿದೆ. ಆದರೆ ನಾವು ಕಂಡ ಹಾಗೆ ಮೊದಲು ಯಾವ ರಸ್ತೆಯಾಗಿತ್ತು? ಅದಕ್ಕೇ ನಾನು ಹೇಳಿದ್ದು ನೀರು ಮತ್ತು ವಿದ್ಯುತ್ ಇವೆರಡು ಸರಿಹೋದರೆ ಬರಗಾಲ ತಪ್ಪುತ್ತದೆಂದು. ಇದಕ್ಕೆ ನಾವು ಹೆಚ್ಚಿನ ಆದ್ಯತೆ ಕೊಡಬೇಕು ಹಾಗೂ ಹೆಚ್ಚಿನ ಬಂಡವಾಳವನ್ನು ಹೂಡಬೇಕು. ಈ ಕೆಲಸವನ್ನು ನಿಮ್ಮ ಸರ್ಕಾರ ಮಾಡಿದ್ದರೆ ನಮಗೆ ಈ ಕಷ್ಟ ಬರುತ್ತಿರಲಿಲ್ಲ. ರೈತನಿಗೆ ನೀರು ಮತ್ತು ವಿದ್ಯುತ್‌ನ್ನು ಸರಿಯಾಗಿ ಕೊಡುವಂತಹ ಕೆಲಸ ನೀವು ಮಾಡಿದ್ದರೆ ಇವತ್ತು ಬರಗಾಲ ಬರುತ್ತಿರಲಿಲ್ಲ. ಭೂಮಿಯ ಒಳಗಡೆ ಸಾಕಷ್ಟು ನೀರು ಇದೆ. ಇದನ್ನು ಮೇಲೆತ್ತಿ ವ್ಯವಸಾಯ ಮಾಡುವುದಕ್ಕೆ ಅವನಿಗೆ ನೀರು

ವಿದ್ಯುತ್ ಒದಗಿಸಿದ್ದರೆ ಇವತ್ತು ಇಂಥ ಸ್ಥಿತಿ ಬರುತ್ತಿರಲಿಲ್ಲ. ರೈತ ತನ್ನ ಎರಡು ಎಕರೆಯಲ್ಲಿ ಕಬ್ಬು ಬೆಳೆದರೆ ಅವನ ಆರ್ಥಿಕ ಪರಿಸ್ಥಿತಿ ಉತ್ತಮವಾಗುತ್ತಿತ್ತು. ಇದಕ್ಕೆ ಹೆಚ್ಚಿನ ಪ್ರಾಮುಖ್ಯತೆ ಕೊಡುವುದರ ಮೂಲಕ ಸರ್ಕಾರ ಇದಕ್ಕಾಗಿ ಹೆಚ್ಚಿಗೆ ಹಣವನ್ನು ಕೊಡುತ್ತಿದೆ. ಇವತ್ತು ಈ ಬರಗಾಲದ ಪರಿಸ್ಥಿತಿಯನ್ನು ಸುಧಾರಿಸಲಿಕ್ಕೆ, ನಮ್ಮ ವಿರೋಧ ಪಕ್ಷದ ಸ್ನೇಹಿತರು ಮೆಚ್ಚುಗೆ ಕೊಡುವ ರೀತಿಯಲ್ಲಿ ಹಣವನ್ನು ಖರ್ಚು ಮಾಡಿ ಈ ಪರಿಸ್ಥಿತಿಯನ್ನು ನಿವಾರಿಸಲಿಕ್ಕೆ ಸರ್ಕಾರ ಖಂಡಿತವಾಗಿ ಪ್ರಥಮ ಆದ್ಯತೆಯನ್ನು ಕೊಟ್ಟು ಕೆಲಸ ಮಾಡುತ್ತಿದೆ ಎನ್ನುವ ಮಾತನ್ನು ಹೇಳಿ, ತಾವುಗಳು ಈ ಬರಗಾಲ ಪರಿಸ್ಥಿತಿಯ ಸುಧಾರಣೆಗಾಗಿ ಕೊಟ್ಟಿರುವ ಅನೇಕ ಸಲಹೆಗಳನ್ನು ತಗೆದುಕೊಂಡು ಸರ್ಕಾರ ಖಂಡಿತವಾಗಿ ಕೆಲಸ ಮಾಡುತ್ತದೆ ಎನ್ನುವ ಮಾತನ್ನು ಹೇಳಿ ತಮಗೆಲ್ಲರಿಗೂ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಮಾನ್ಯ ಕೃಷಿ ಸಚಿವರು ತಾವು ಉತ್ತರಿಸುತ್ತೀರಾ?

ಶ್ರೀ ಟಿ.ಬಿ.ಜಯಚಂದ್ರ: ಮಾನ್ಯ ಕಂದಾಯ ಸಚಿವರು ಸಮಗ್ರವಾದ ಉತ್ತರವನ್ನು ಕೊಟ್ಟಿರುವುದರಿಂದ, ಮಾನ್ಯ ಸದಸ್ಯರು ಏನಾದರೂ ವಿವರಣೆ ಕೇಳಬಯಸಿದರೆ ಅದಕ್ಕೆ ನಾನು ಉತ್ತರಿಸುತ್ತೇನೆ.

ಅಧ್ಯಕ್ಷರು: ಈಗ ಸದನವನ್ನು ಪುನಃ 3 ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವು 1-47ಕ್ಕೆ ಮುಂದೂಡಲ್ಪಟ್ಟು ಪುನಃ 3ಕ್ಕೆ ಸಮಾವೇಶಗೊಳ್ಳಲು ನಿರ್ಧರಿಸಿತು)

(ಸದನವು ಮಧ್ಯಾಹ್ನ 3 ಗಂಟೆ 10 ನಿಮಿಷಕ್ಕೆ ಪ್ರಾರಂಭವಾಯಿತು. ಸನ್ಮಾನ್ಯ ಸಭಾಧ್ಯಕ್ಷರು (ಶ್ರೀ ಎಂ.ಪಿ.ವೆಂಕಟಪ್ಪನವರು) ಪೀಠವನ್ನು ಅಲಂಕರಿಸಿದ್ದರು)

ವಿಷಯ: ಬರಗಾಲ ಪರಿಸ್ಥಿತಿಯ ಚರ್ಚೆಗೆ ಉತ್ತರ.

ಅಧ್ಯಕ್ಷರು: ಮಾನ್ಯ ವಿರೋಧಪಕ್ಷದ ನಾಯಕರೆ, ನಿಮೇನಾದರೂ ಕ್ಲಾರಿಫಿಕೇಷನ್ ಕೇಳುವುದಿದ್ದರೆ, ನೀವು ಕೃಷಿ ಮಂತ್ರಿಗಳನ್ನು ಕೇಳಬಹುದು. ಏಕೆಂದರೆ, ಮಾನ್ಯ ಕಂದಾಯ ಮಂತ್ರಿಗಳು ಪೂರ್ಣ ವಿವರವನ್ನು ನೀಡಿರುವುದರಿಂದ ನಾನು ಬರೀ ಕ್ಲಾರಿಫಿಕೇಷನ್‌ಗೆ ಉತ್ತರವನ್ನು ಕೊಡುತ್ತೇನೆಂದು ಹೇಳಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಮಾನ್ಯ ಕೃಷಿ ಮಂತ್ರಿಗಳು ಏನಾದರೂ ಹೇಳುವುದಿದ್ದರೆ ಹೇಳಿಬಿಡಲಿ, ನಾವು ಎಲ್ಲವನ್ನೂ

ಒಂದೇ ಸಲ ಕೇಳುತ್ತೇವೆ.

ಅಧ್ಯಕ್ಷರು: ನಿಮ್ಮ ಕೃಷಿ ಇಲಾಖೆಯ ಬಗ್ಗೆ ಏನಾದರೂ ಮಾತನಾಡಿದ್ದರೆ ಅದರ ಬಗ್ಗೆ ನೀವು ಹೇಳಬಹುದು.

+ ಶ್ರೀ ಟಿ.ಬಿ.ಜಯಚಂದ್ರ(ಕೃಷಿ ಸಚಿವರು): ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಆಗಿರುವ ಮಳೆಬೆಳೆಗಳ ಪರಿಸ್ಥಿತಿಯ ಬಗ್ಗೆ ಸಾಕಷ್ಟು ಸದಸ್ಯರು ಅದರ ಬಗ್ಗೆ ಪ್ರಸ್ತಾಪ ಮಾಡಿರುತ್ತಾರೆ. ನಾನು ವಸ್ತು ಸ್ಥಿತಿಯ ಬಗ್ಗೆ ಲಿಖಿತ ಮೂಲಕ ಒಂದು ಹೇಳಿಕೆಯನ್ನು ಕೊಡಲು ತಯಾರಾಗಿದ್ದೇನೆ. ತಾವು ಅನುಮತಿಯನ್ನು ಕೊಟ್ಟರೆ ಅದನ್ನು ಎಲ್ಲಾ ಸದಸ್ಯರಿಗೆ ವಿತರಣೆ ಮಾಡಿಸುತ್ತೇನೆ.

ರಾಜ್ಯದಲ್ಲಿ ಮಳೆ ಅಭಾವದ ಕಾರಣ ತೋರಿರುವ ಬರಗಾಲದ ಬಗ್ಗೆ ಕೃಷಿ ಮಂತ್ರಿಗಳ ಹೇಳಿಕೆ

ಕರ್ನಾಟಕ ರಾಜ್ಯದಲ್ಲಿ ಜೂನ್ ಕೊನೆಯವರೆಗೂ ಮತ್ತು ಜುಲೈ ಮಾಹೆಯ ಮೊದಲನೆ ವಾರದವರೆಗೂ ಕರಾವಳಿ ಜಿಲ್ಲೆಗಳು ಮತ್ತು ಮಲೆನಾಡು ಜಿಲ್ಲೆಗಳನ್ನು ಹೊರತುಪಡಿಸಿ ಬೇಲೆ ಜಿಲ್ಲೆಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಮಳೆಯಾಗಿರುವುದಿಲ್ಲ. ಕಳೆದ 3-4 ದಿನಗಳಿಂದ ರಾಜ್ಯದ ಇತರೆ ಜಿಲ್ಲೆಗಳಲ್ಲಿ ಮಳೆಯಾಗಿದ್ದು ರೈತರು ಬೇಸಾಯ ಕಾರ್ಯಗಳನ್ನು ಪ್ರಾರಂಭಿಸಿರುತ್ತಾರೆ. ಆದರೆ ರಾಯಚೂರು, ಬಿಜಾಪುರ ಮತ್ತು ಗುಲ್ಬರ್ಗ ಜಿಲ್ಲೆಗಳಲ್ಲಿ ಇನ್ನೂ ಯಾವುದೇ ಕೃಷಿ ಕಾರ್ಯಗಳು ಪ್ರಾರಂಭವಾಗಿರುವುದಿಲ್ಲ.

ಜೂನ್ ಅಂತ್ಯದವರೆಗೆ ಮತ್ತು ಜುಲೈ ಮಧ್ಯಭಾಗದವರೆಗೂ ಮಳೆ ಬರದೇ ಇದ್ದಲ್ಲಿ ಜುಲೈ ಅಂತ್ಯದಲ್ಲಿ ಕೆಲವೊಮ್ಮೆ ಆಗಸ್ಟ್ ತಿಂಗಳ ಮೊದಲನೆ ವಾರದಲ್ಲಿ ಮಳೆ ಬಂದರೂ ದಕ್ಷಿಣ ಜಿಲ್ಲೆಗಳಲ್ಲಿ ಪ್ರಮುಖವಾಗಿ ರಾಗಿಯನ್ನು ಬಿತ್ತನೆ ಮಾಡಲು ಅವಕಾಶವಿದೆ. ಇಂತಹ ಪರಿಸ್ಥಿತಿಯಲ್ಲಿ ಈ ಜಿಲ್ಲೆಗಳಲ್ಲಿ ರಾಗಿಯ ದೀರ್ಘಾವಧಿ ತಳಿಗಳ ಬದಲು ಮಧ್ಯಮಾವಧಿ ಮತ್ತು ಅಲ್ಪಾವಧಿ ತಳಿಗಳನ್ನು ಯಾವುದೇ ಇಳುವರಿ ನಷ್ಟವಿಲ್ಲದೆ ಬೆಳೆಯಲು ಸಾಧ್ಯವಿದೆ. ಉತ್ತರ ಜಿಲ್ಲೆಗಳಲ್ಲಿ ಆರಂಭಿಕ ಮಳೆ ಇಲ್ಲದ್ದರಿಂದ ದ್ವಿದಳಧಾನ್ಯಗಳಾದ ಉದ್ದು, ಹೆಸರು ಮತ್ತು ಸೋಯಾಬೀನ್ ಬೆಳೆಗಳ ವಿಸ್ತೀರ್ಣದಲ್ಲಿ ಕಡಿಮೆಯಾಗುತ್ತದೆ. ಆದರೆ ಈ ಬೆಳೆಗಳ ನಂತರ ಸಾಮಾನ್ಯವಾಗಿ ರೈತರು ಮುಂಗಾರು ಬೆಳೆಗಳಾದ ತೊಗರಿ, ಜೋಳ, ಹತ್ತಿ ಮುಂತಾದ ಬೆಳೆಗಳನ್ನು ಬೆಳೆಯುತ್ತಾರೆ. ಕಪ್ಪು ಮಣ್ಣಿನ ಭೂಮಿಯಲ್ಲಿ ಹಿಂಗಾರು ಬೆಳೆಗಳನ್ನು ಬೆಳೆಯುತ್ತಾರೆ.

ಸಧ್ಯದ ಪರಿಸ್ಥಿತಿಯಲ್ಲಿ ದ್ವಿದಳಧಾನ್ಯಗಳ ಬೆಳೆ ವಿಸ್ತೀರ್ಣ ಕಡಿಮೆಯಾಗಿದ್ದರೂ